## 48

# ಶಿಷ್ಯತ್ವದ ಗುರುತುಗಳು

### ಓದುವ ಮನೆಪಾಠ #19

VI. ಮೂರನೇ ಪಸ್ಕದಿಂದ, ಆತನು ಬೆಥನಿಗೆ ಹಿಂದಿರುಗಿದ ಸಮಯದವರೆಗೆ (ಮುಂದುವರೆಯುವದು).

- H. ಹೆರೋದನ ಕ್ಷೇತ್ರದಿಂದ ಮತ್ತೊಮ್ಮೆ ತಪ್ಪಿಸಿಕೊಂಡದ್ದು.
  - 6. ದೆವ್ವ ಹಿಡಿದ ಬಾಲಕನನ್ನು ಗುಣಪಡಿಸಿದ್ದು (ಮತ್ತಾಯ 17:14-21; ಮಾರ್ಕ 9:14-29; ಲೂಕ 9:37-43).
  - 7. ಗಲಿಲಾಯಕ್ಕೆ ಹಿಂದಿರುಗಿದ್ದು (ಮರಣದ ಕುರಿತು ಪುನಃ ತಿಳಿಸಲಾಯಿತು) (ಮತ್ತಾಯ 17:22, 23; ಮಾರ್ಕ 9:30-32; ಲೂಕ 9:43-45).
- I. ದೇವಾಲಯದ ತೆರಿಗೆ ಕುರಿತು (ಮತ್ತಾಯ 17:24-27).
- J. ಚಿಕ್ಕಮಕ್ಕಳಂತೆ ಇರಬೇಕೆಂಬ ಬೋಧನೆ (ಮತ್ತಾಯ 18:1-14; ಮಾರ್ಕ 9:33-50; ಲೂಕ 9:46-50).

### ಪೀಠಿಕೆ

ಯೇಸು ಇಹಲೋಕದ ಮೇಲಿನ ತನ್ನ ಅಂತಿಮ ದಿನಗಳ ಆರಂಭದಲ್ಲಿ, ತನ್ನ ಹೊರಡುವಿಕೆಗೋಸ್ಕರ ಅಪೊಸ್ತಲರನ್ನು ಸಿದ್ಧಪಡಿಸುವುದರತ್ತ ಕೇಂದ್ರೀಕರಿಸಿದನು. ಆತನು ಪ್ರಯಾಣಿಸುತ್ತಿರುವಂತೆ, "ಇದು ಜನರಿಗೆ ಗೊತ್ತಾಗಬಾರದೆಂದು ಆತನಿಗೆ ಮನಸ್ಸಿತ್ತು. ಯಾಕೆಂದರೆ ಆತನು ತನ್ನ ಶಿಷ್ಯರಿಗೆ ಉಪದೇಶ ಮಾಡುತ್ತಾ ..." (ಮಾರ್ಕ 9:30ಬಿ, 31). ಒಂದು ಪರಿಚ್ಛೇದವು[1] "ಇದರಿಂದ ಆತನಿಗೆ ಹೆಚ್ಚಿನ ಸಮಯ ತನ್ನ ಶಿಷ್ಯರ ಸಂಗಡ ಕಳೆಯುವುದಕ್ಕಾಗಿ, ಆತನು ಎಲ್ಲಾ ಪ್ರಚಾರವನ್ನು ಅಲಕ್ಷಿಸುವವನಾಗಿದ್ದನು" ಎಂದು ಹೇಳುವುದಾಗಿದೆ. "ನನ್ನ ಶಿಷ್ಯನಾಗುವ ಅರ್ಥ ಏನಾಗಿದೆ" ಎಂಬುದು ಈ ಬೋಧನೆಯ ಅವಶ್ಯವಾದ ಮುಖ್ಯ ವಿಚಾರ ಆಗಿರಬೇಕು. ಅಪೊಸ್ತಲರಿಗೆ ಈ ಪಾಠಗಳು ಅವಶ್ಯವಾಗಿದ್ದವು ಹಾಗೆಯೇ ನಮಗೂ ಕೂಡಾ.

### ಕ್ರಿಸ್ತನ ಬಲದ ಮೇಲೆ ವಿಶ್ವಾಸವಿಡಿರಿ ಹೊರತು ನಮ್ಮ ಸ್ವಂತ ಬಲದ ಮೇಲಲ್ಲ (ಮತ್ತಾಯ 17:14-21; ಮಾರ್ಕ 9:14-29; ಲೂಕ 9:37-43)

ನಮ್ಮ ಅಧ್ಯಯನವು ಕರ್ತನು ರೂಪಾಂತರ ಹೊಂದಿದ "ಪರಿಶುದ್ಧ ಪರ್ವತ"ದಿಂದ ಯೇಸು ಪೇತ್ರ ಯೋಹಾನ ಮತ್ತು ಯಾಕೋಬರು ಇಳಿದು ಬಂದ ಘಟನೆಯಿಂದ ಆರಂಭವಾಗುತ್ತದೆ (2 ಪೇತ್ರ 1:18). ಹತ್ತು ಆಜ್ಞೆಗಳನ್ನು ಪಡೆದ ನಂತರ ಮೋಶೆಯು ಬೆಟ್ಟದ ಮೇಲಿಂದ ಇಳಿದು ಬಂದಾಗ ಅವಿಧೇಯತೆಯ (ವಿಮೋಚನಕಾಂಡ 32); ಗಲಿಬಿಲಿಯ ತೊಂದರೆ ಗೊಳಿಸುವಿಕೆಯಿಂದ ಆತನು ಸ್ವಾಗತಿಸಲ್ಪಟ್ಟನು.

ಒಬ್ಬ ಮನುಷ್ಯನು ತನ್ನ ದೆವ್ವ ಪೀಡಿತ ಮಗನನ್ನು ಯೇಸುವಿನಿಂದ ವಾಸಿಮಾಡಿಸಿದಕ್ಕೆಂದು ಕರೆತಂದನು, ಆದರೆ ಕರ್ತನು ಶಿಷ್ಯರಿಗೆ ಆ ದೆವ್ವವನ್ನು ಓಡಿಸುವುದಕ್ಕಾಗಲಿಲ್ಲ. ಎಂದೆಂದಿಗೂ ಹಾಜರಿರುತ್ತಿದ್ದ, ಎಂದೆಂದಿಗೂ ತಮ್ಮ ಟೀಕಾಸ್ತ್ರವನ್ನೇ ಧರಿಸಿಯೇ ನಿಂತಿರುತ್ತಿದ್ದ ಶಾಸ್ತ್ರಿಗಳು ಆ ಪರಿಸ್ಥಿತಿಯನ್ನು ಅವಕಾಶವನ್ನಾಗಿ ಮಾಡಿಕೊಂಡು ಕ್ರಿಸ್ತ ಸೇವೆಯನ್ನು ದೂಷಿಸಿದರು.[2] ಅಲ್ಲಿ

ಉಪಸ್ಥಿತವಿದ್ದ ಎಲ್ಲರಲ್ಲಿನ (ಶಾಸ್ತ್ರಿಗಳು, ಜನಸಮೂಹ, ಆ ಹುಡುಗನ ತಂದೆ, ಯೇಸುವಿನ ಶಿಷ್ಯರೂ ಕೂಡಾ) ನಂಬಿಕೆಯ ಬಲಹೀನತೆಯು ಕ್ರಿಸ್ತನ ಹೃದಯವನ್ನು ಮುರಿಯಿತು (ಮತ್ತಾಯ 17:17; ಮಾರ್ಕ 9:19; ಲೂಕ 9:41). ಅದಲ್ಲದೆ, ಅವರ ಅಪನಂಬಿಕೆಯಲ್ಲಿಯ ಕೂಡಾ ತನ್ನ ನಂಬಿಗಸ್ತಿಕತೆಯನ್ನು[3] ಮೆರೆದನು ಮತ್ತು ಆ ಮಗುವನ್ನು ವಾಸಿಮಾಡಿದನು[4] (ಮತ್ತಾಯ 17:18; ಮಾರ್ಕ 9:25, 26; ಲೂಕ 9:41).

ನಂತರ ಕರ್ತನೂ ಮತ್ತು ಆತನ ಅಪೊಸ್ತಲರು ಒಂಟಿಯಾಗಿದ್ದಾಗ ಅವರು "(ದೆವ್ವವನ್ನು) ಅದನ್ನು ಬಿಡಿಸಲು ನಮ್ಮಿಂದ ಏಕೆ ಆಗಲಿಲ್ಲ?" ಎಂದು ಕೇಳಿದರು (ಮತ್ತಾಯ 17:19; ಮಾರ್ಕ 9:28). ಅದಕ್ಕಾತನು "ನಿಮ್ಮ ನಂಬಿಕೆ ಕಡಿಮೆ ಆಗಿರುವುದರಿಂದಲೇ ಆಗಲಿಲ್ಲ; ನಿಮಗೆ ಸತ್ಯವಾಗಿ ಹೇಳುತ್ತೇನೆ, ಸಾಸಿವೆಕಾಳಷ್ಟು ನಂಬಿಕೆ ನಿಮಗೆ ಇರವುದಾದದರೆ ನೀವು ಈ ಬೆಟ್ಟಕ್ಕೆ ಇಲ್ಲಿಂದ ಅಲ್ಲಿಗೆ ಹೋಗು ಎಂದು ಹೇಳಿದರೂ ಹೋಗುವದು; ನಿಮ್ಮ ಕೈಯಿಂದಾಗದಂಥದ್ದು ಒಂದು ಇರುವುದಿಲ್ಲ" (ಮತ್ತಾಯ 17:20)[5] ಎಂದು ಉತ್ತರಿಸಿದನು. ಕಥೆಯಲ್ಲಿನ ತಂದೆಯಂತೆಯೇ (ಮಾರ್ಕ 9:24), ಶಿಷ್ಯರೂ ನಂಬಿದರೆ - ಅವರು ನಿಜವಾಗಿಯೂ ನಂಬಿರಲಿಲ್ಲ (ಮತ್ತಾಯ 17:20). ನಮ್ಮ ಹಾಗೆ, ಅವರೂ ಕೂಡಾ ತಮ್ಮ ನಂಬಿಕೆಯೊಡನೆ ಹೋರಾಡಿದರು.

ಅಪೊಸ್ತಲರು ದೆವ್ವಗಳನ್ನು ಬಿಡಿಸುವಲ್ಲಿ ಅಸಮರ್ಥರಾಗಿದ್ದರು ಯಾಕಂದರೆ ಅವರು *ದೆವ್ವ ಬಿಡಿಸುವ* ತಮ್ಮ ಸ್ವಂತ ಸಾಮರ್ಥದ ಮೇಲೆ ನಂಬಿಕೆಯಿಟ್ಟವರಾಗಿದ್ದರು ಎಂದು ಅನೇಕ ಬರಹಗಾರರು ನಂಬುವವರಾಗಿದ್ದಾರೆ.[6] ಪೌಲನು ಹೀಗೆ ಬರೆಯುತ್ತಾನೆ. "ನಾವು ನಮ್ಮ ಮೇಲೆ ಭರವಸವಿಟ್ಟುಕೊಳ್ಳದೆ ... ದೇವರ ಮೇಲೆ ಭರವಸವಿಡುವವರಾಗಬೇಕು" (2 ಕೊರಿಂಥ 1:9). ಬಲು ಹಿಂದೆ ದಾವೀದನು ಹೀಗೆ ಹೇಳಿದನು. "ನ್ಯಾಯವಾದ ಯಜ್ಞಗಳನ್ನು ಸಮರ್ಪಿಸಿರಿ; *ಯೆಹೋವನಲ್ಲಿಯೇ ಭರವಸವಿಡಿರಿ*" (ಕೀರ್ತನೆ 4:5; ಒತ್ತಿ ಹೇಳಿದ್ದ ನನ್ನದು). ಜ್ಞಾನಿಯಾದ ಮನುಷ್ಯನು: "ಸ್ವಬುದ್ಧಿಯನ್ನು ಆಧಾರ ಮಾಡಿಕೊಳ್ಳದೆ ಪೂರ್ಣ ಮನಸ್ಸಿನಿಂದ ಯೆಹೋವನಲ್ಲಿ ಭರವಿಡು ಎಂಬ ಭಾವನೆಯನ್ನು ಪ್ರತಿಧ್ವನಿಗೈದಿದ್ದಾನೆ" (ಜ್ಞಾನೋಕ್ತಿ 3:5).

ನಿಜ ಶಿಷ್ಯರು ತಮ್ಮ ಸ್ವಂತ ಕೊರತೆಗಳನ್ನು ಒಪ್ಪಿಕೊಳ್ಳುತ್ತಾರೆ (ರೋಮಾಪುರ 3:10). ಆತನು ತನ್ನ ಬಲಕ್ಕಾಗಿ ಕರ್ತನಲ್ಲಿ ನಂಬಿಕೆಯನ್ನು ಇಟ್ಟವನಾಗಿರುತ್ತಾನೆ (ನೋಡಿ 2 ಸಮುವೇಲ 22:31; ಕೀರ್ತನೆ 9:10; 37:3, 5; 40:3, 4; 115:10, 11; ಯೆಶಾಯ 26:4; ಪಿಲಿಪ್ಪಿ 2:24).

## ಕರ್ತನ ಮಾತುಗಳ ಮೇಲೆ ಆತುಕೊಳ್ಳಿರಿ ಹೊರತು ನಿಮ್ಮ ಅರಿತುಕೊಳ್ಳುವಿಕೆಯ ಮೇಲೆ ಅಲ್ಲ

## (ಮತ್ತಾಯ 17:22, 23; ಮಾರ್ಕ 9:30-32; ಲೂಕ 9:43-45)

ಯೇಸು ಮತ್ತು ಹನ್ನೆರಡು ಜನ ಶಿಷ್ಯರು "ಪಿಲಿಪ್ಪನ ಕೈಸರೆಯ ಎಂಬ ಪ್ರಾಂತ್ಯದ ಪಟ್ಟಣ" ದಿಂದ (ಮತ್ತಾಯ 16:13; ನೋಡಿರಿ ಮಾರ್ಕ 8:27) ಗಲಿಲಾಯಕ್ಕೆ ಮರಳಿದರು (ಮತ್ತಾಯ 17:22; ಮಾರ್ಕ 9:30).[7] ಹಿಂದಿನ ಪ್ರಯಾಣಗಳಲ್ಲಿ ಸಂಭವಿಸಿದ ಅಸಂಭವನೀಯತೆಗಳಿಂದ ಯೇಸು ಆ ಪ್ರಾಂತ್ಯದಲ್ಲಿ ಹಾದು ಹೋಗುವಾಗ ಜನಜಂಗುಳಿಯನ್ನು ದೂರವಿರಿಸಿದನು. ಹಿಂದೆ ಗಮನಿಸಿದಂತೆ "ಇದು ಜನರಿಗೆ ಗೊತ್ತಾಗಬಾರದೆಂದು ಆತನಿಗೆ ಮನಸ್ಸಿತ್ತು. ಯಾಕೆಂದರೆ ಆತನು ತನ್ನ ಶಿಷ್ಯರಿಗೆ ಉಪದೇಶಮಾಡು ..." (ಮಾರ್ಕ 9:30, 31) ವುದಕ್ಕಾಗಿದೆ.

ಆತನು ಪದೇ ಪ್ರಸ್ತಾಪಿಸುತ್ತಿದ್ದ ವಿಷಯವೆಂದರೆ ಆತನ ಸನ್ನಿಹಿತವಾದ ಮರಣವೇ ಆಗಿತ್ತು "... ತನ್ನ ಶಿಷ್ಯರಿಗೆ ಬೋಧಿಸುತ್ತಾ ಮನುಷ್ಯಕುಮಾರನು ಜನರ ಕೈಗೆ ಒಪ್ಪಿಸಲ್ಪಡುತ್ತಾನೆ;

ಅವರು ಅವನನ್ನು ಕೊಲ್ಲುವರು; ಕೊಂದ ಮೂರು ದಿನದ ಮೇಲೆ[8] ಆತನು ಜೀವಿತನಾಗಿ ಎದ್ದು ಬರುವನು" (ಮಾರ್ಕ 9:31; ನೋಡಿರಿ ಮತ್ತಾಯ 17:22, 23).

ಲೂಕನ ವಿವರಣೆಯ ಪ್ರಕಾರ, ಆತನು "ನೀವಂತೂ ಈ ಮಾತುಗಳನ್ನು ನಿಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಿರಿ" (ಲೂಕ 9:44ಎ) ಎಂದು ಹೇಳುವ ಮೂಲಕ ಈ ಪ್ರಸ್ತಾವನೆಯನ್ನು ಉದ್ಘೋಷಿಸಿದನು. "ಕೇಳಿರಿ, ಸ್ಪಷ್ಟವಾಗಿ ಕೇಳಿರಿ! ಕೇಳಿರಿ ಮತ್ತು ಅದರ ಬಗೆಗೆ ಯೋಚಿಸಿರಿ! ಕೇಳಿರಿ ಮತ್ತು ನಾನು ಹೇಳುವುದನ್ನು ಅರಿತುಕೊಳ್ಳಿರಿ" ಎಂದು ಯೇಸು ಕ್ರಿಸ್ತನ ಹೇಳಿಕೆಯಲ್ಲಿ ಸ್ಪಷ್ಟತೆಯನ್ನು ಅರಿತುಕೊಳ್ಳಬಹುದು. ಕೇಳುವದು, ಕಿವಿಗೊಡು ಎಂಬ ಪದಕ್ಕೆ ಸಮಾನವಾದದ್ದು ಅಲ್ಲ. ಕರ್ತನು ಯಾವುದೇ ಸಮಯದಲ್ಲಿ ಮಾತನಾಡಬಹುದು. ಆತನ ವಾಕ್ಯಗಳನ್ನು ಕೇಳಿ ನಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳುವದು ನಮಗೆ ಅವಶ್ಯವಿರುವುದು ಆಗಿದೆ, ಹೀಗೆ ಅದು ನಮ್ಮ ಜೀವಿತದಲ್ಲಿ ಅವಿರ್ಭವಿಸುವುದರಲ್ಲಿ ಕಂಡುಬರುವುದಾಗಿದೆ!

ಯೇಸುವಿನ ಮಾತಿನಿಂದ ಶಿಷ್ಯರು "ಬಲು ದುಃಖಪಟ್ಟರು" (ಮತ್ತಾಯ 17:23), ಆದರೆ ಮತ್ತೊಂದಾವರ್ತಿ "ಅವರು ಆ ಮಾತುಗಳನ್ನು ಗ್ರಹಿಸಲಿಲ್ಲ" (ಮಾರ್ಕ 9:32ಎ). ಅವರು ಆತನ ಮರಣದ ಬಗೆಗಿನ ಹೇಳಿಕೆಯನ್ನು ಅರಿತುಕೊಳ್ಳಲಿಲ್ಲ. ಮೆಸ್ಸೀಯನ ಸಾವು ಅವರ ಮೆಸ್ಸಿಯನ ಬಗೆಗಿನ ನಿರೀಕ್ಷೆಗೆ ವಿರೋಧಭಾಸವಾಗಿತ್ತು.[9] ಅವರು ಆತನ ಪುನರುತ್ಥಾನದ ಬಗೆಗಿನ ಹೇಳಿಕೆಯನ್ನೂ ಅರಿತುಕೊಳ್ಳಲಿಲ್ಲ ಯಾಕೆಂದರೆ ಆಸಂಗತಿಯು ಅವರ ಅನುಭವಕ್ಕೆ ವ್ಯತಿರಿಕ್ತವಾದದ್ದುದಾಗಿತ್ತು (ನೋಡಿರಿ ಮಾರ್ಕ 9:10).

ಅದನ್ನು ಅವರು ಅರಿತುಕೊಳ್ಳದಿದ್ದಾಗಲೂ ಕೂಡಾ ಅದಕ್ಕೆ ಬೇಕಾದಂಥ ವಿವರಣೆಯನ್ನು "ಆತನನ್ನು ಕೇಳುವುದಕ್ಕೆ ಅಂಜಿದರು" (ಮಾರ್ಕ 9:32ಬಿ). ಅವರ ಪ್ರಶ್ನೆಯು ಅಪನಂಬಿಕೆ ಎಂದು ತಿಳಿದುಕೊಳ್ಳಲ್ಪಡಬಹುದು ಎಂದು ಯೋಚಿಸಿ ಅದರ ಬಗೆಗೆ ಹೇಳಲು ಅವರು ಹೆದರಿರಬಹುದು. ಪೇತ್ರನಿಗೆ ಆದಂತೆ ತಮಗೂ ಗದರಿಕೆ ಆಗಬಹುದೆಂದು ಅವರು ಹೆದರಿರಬಹುದು (ಮತ್ತಾಯ 16:23). ತಮ್ಮ ಮೌಢ್ಯತೆಯನ್ನು ಹೊರಹಾಕಲು ಅವರು ಹಿಂದೆ ಮುಂದೆ ಮಾಡಿರಬಹುದು. ನನ್ನ ಅಜ್ಞಾನದ ಮೂಲಕವೇ ಜ್ಞಾನವನ್ನು ಸಂಪಾದಿಸಬಹುದು ಎಂದು ಬಲು ದಿನದ ಹಿಂದೆ ನಾನು ಕಲಿತಿದ್ದೆನು. ಅಂಥ ಅಂಗೀಕರವು ನೋವುಯುಕ್ತವಾದದ್ದು, ಆದರೆ ಅದು ಅವಶ್ಯವಾದದ್ದು ಆಗಿದೆ.

ಈ ಘಟನೆಗೆ ಲೂಕನ ವಿವರಣೆಯು ಕುತೂಹಲಮಯವಾದ ಅಂಶವನ್ನು ಸೇರಿಸುವುದಾಗಿದೆ: "... *ಅವರಿಗೆ ಮರೆಯಾದುದರಿಂದ* ಅದರ ಅರ್ಥವನ್ನು ಅವರು ತಿಳಿಯದೆ ಹೋದರು ಆ ಮಾತಿನ ವಿಷಯದಲ್ಲಿ ಅವರು ಆತನನ್ನು ಕೇಳುವುದಕ್ಕೆ ಅಂಜಿದರು" (ಲೂಕ 9:45; ಒತ್ತಿ ಹೇಳಿದ್ದು ನನ್ನದು). ಯಾರು ಅಥವಾ ಯಾವುದನ್ನು ಶಿಷ್ಯರಿಂದ ಅರ್ಥದ ಮರೆ ಮಾಡುತ್ತಾ ಇದ್ದಾರೆ? ಕರ್ತನು ಅರ್ಥವನ್ನು ಮರೆಮಾಡಿರಬಹುದು ಯಾಕೆಂದರೆ ಯೇಸುವಿನ ಹೇಳಿಕೆಯು ಅವುಗಳು ಸಂಪೂರ್ಣವಾಗಿ ಗ್ರಹಿಸಲು ಅಸಂಖ್ಯವಾಗಿಸಿದ್ದಾಗಿದೆ. ಸೈತಾನನು ಅವನು ಮರೆಮಾಡಿರಬಹುದು; ಆತನು ಮನುಷ್ಯನ ಮನದಿಂದ ದೇವರ ವಾಕ್ಯವನ್ನು ತೆಗೆದುಬಿಡಲು ನಿರಂತರವಾಗಿ ಪ್ರಯತ್ನಿಸುತ್ತಾ ಇದ್ದಾನೆ (ಲೂಕ 8:12). "ಮುಚ್ಚುವಿಕೆಯು ದೇವರ ಮರ್ಮದ ಉಳಿಯುವಿಕೆ ಅಲ್ಲ [ಇದಕ್ಕೆ ನಾನು 'ಅಥವಾ ಸೈತಾನನ' ಎಂದು ಸೇರುವವನಾಗಿದ್ದೇನೆ] ಆದರೆ ಜನರ ಮಿತಿಗಳು ಆಗಿವೆ ಎಂದು Burton Coffman ರವರು ಹೇಳಿರುವುದು ಸರಿ ಎಂದು ನಾನು ಯೋಚಿಸುವವನಾಗಿದ್ದೇನೆ."[10] ಅಪೊಸ್ತಲರ ದೇವರ ರಾಜ್ಯದ ಪೂರ್ವಕಲ್ಪನೆಯ ಮರೆಮಾಚುವಿಕೆಯು ದೇವರ ಸಂಕಲ್ಪದಿಂದಲ್ಲ ಆದರೆ ಮಾನುಷ ಇತಿಮಿತಿಗಳಿಂದಲೇ. ಹೆಚ್ಚಿನ ಮಟ್ಟಿಗೆ ಶಿಷ್ಯರಲ್ಲಿದ್ದ ತಪ್ಪು ಕಲ್ಪನೆಗಳು ಭಾಗಶ ಇದಕ್ಕೆ ಕಾರಣವಾಗಿದ್ದವು.

ಈ ಸಂಗತಿಯಲ್ಲಿ ಕರ್ತನು ಮರಣವನ್ನಪುವುದರ ಬಗೆಗೆ ಹೇಳಿದ್ದನ್ನು ಒಪ್ಪಿಕೊಳ್ಳುವದು ಶಿಷ್ಯರಿಗೆ ಕಷ್ಟಸಾಧ್ಯವಾದ ಸಂಗತಿ ಆಗಿತ್ತು. ಶಿಷ್ಯತ್ವದ ಒಂದು ಅವಶ್ಯಕವಾದ ಗುಣ

ಎಂದರೆ ಕರ್ತನು ಏನು ಹೇಳುತ್ತಾನೋ, ಒಂದು ವೇಳೆ ಅದು ಒಬ್ಬನ ವಿಚಾರವಾಗಿರಲಿ ಅಥವಾ ತಾರ್ಕಿಕವಾಗಿರಲಿ ಅದನ್ನು ಒಪ್ಪಿಕೊಳ್ಳುವುದೇ ಆಗಿದೆ. ಮಾನವನ ಜ್ಞಾನದ ಮೇಲೆ ಆತುಕೊಳ್ಳುವದು ನಿರರ್ಥಕವಾದದ್ದೆಂದು ಪೌಲನು ಬರೆಯುವಾಗ ಒತ್ತಿ ಹೇಳುತ್ತಾನೆ,

> ಶಿಲುಬೆಯ ವಿಷಯವಾದ ಮಾತು ನಾಶನದ ಮಾರ್ಗದಲ್ಲಿರುವವರಿಗೆ ಹುಚ್ಚುಮಾತಾಗಿದೆ, ರಕ್ಷಣೆಯ ಮಾರ್ಗದಲ್ಲಿರುವ ನಮಗಾದರೋ ದೇವರ ಶಕ್ತಿಯಾಗಿದೆ. ಜ್ಞಾನಿಗಳ ಜ್ಞಾನವನ್ನು ನಾಶಮಾಡುಮೆ ವಿವೇಕಿಗಳ ವಿವೇಕವನ್ನು ನಿರಾಕರಿಸುವೆನು ಎಂಬುದಾಗಿ ಶಾಸ್ತ್ರೋಕ್ತಿಯುಂಟಲ್ಲಾ. ಜ್ಞಾನಿಯು ಎಲ್ಲಿ? ಶಾಸ್ತ್ರಿಯು ಎಲ್ಲಿ? ಇಹಲೋಕದ ತರ್ಕವಾದಿಯು ಎಲ್ಲಿ? ದೇವರು ಇಹಲೋಕದ ಜ್ಞಾನವನ್ನು ಹುಚ್ಚುತನವಾಗಿ ಮಾಡಿದನಲ್ಲವೇ. ಹೇಗಂದರೆ ಲೋಕಜ್ಞಾನವೆ ನಿಸುವ ಮಾರ್ಗದಿಂದ ದೇವರನ್ನು ತಿಳುಕೊಳ್ಳದೆ ದೇವರ ಜ್ಞಾನದ ಸಂಕಲ್ಪವೇ; ಹೀಗಾದ ಮೇಲೆ ಹುಚ್ಚು ಮಾತು ಎನಿಸಿಕೊಂಡಿರುವ ನಮ್ಮ ಪ್ರಸಂಗದಿಂದಲೇ ನಂಬುವರನ್ನು ರಕ್ಷಿಸುವದು ದೇವರಿಗೆ ಒಳ್ಳೆಯದೆಂದು ತೋರಿತು (1 ಕೊರಿಂಥ 1:18-21).

ನಿಜ ಶಿಷ್ಯನು ಮನುಷ್ಯನ ತರ್ಕದ ಮೇಲೆ ಆತುಕೊಳ್ಳಲಾರನು (ಜ್ಞಾನೋಕ್ತಿ 3:5), ಆದರೆ ದಿವ್ಯ ಪ್ರಕಟವಾಗುವಿಕೆಯ ಮೇಲೆ ಆತುಕೊಳ್ಳುವನಾಗಿದ್ದಾನೆ (2 ತಿಮೊಥೆ 3:16, 17).

## ನಿನ್ನ ಹಕ್ಕುಗಳ ಬಗೆಗೆ ಚಿಂತಿಸದೆ ದೇವರಿಗೋಸ್ಕರ ಯೋಚಿಸುವವನಾಗಿರು (ಮತ್ತಾಯ 17:24-27[11])

ಯೇಸು ಮತ್ತು ಆತನ ಗುಂಪು ಗಲಿಲಾಯದಲ್ಲಿ ಪ್ರಯಾಣಿಸುತ್ತಿರುವಾಗ, ಆ ಪ್ರಾಂತ್ಯದಲ್ಲಿ ತನ್ನ ಸೇವೆಯನ್ನು ಗೈಯುತ್ತಿರುವಾಗ ಕರ್ತನ ಸ್ಥಳವೆಂಬಂತಿದ್ದಂತ ಸೇವೆಗೈದ ಪಟ್ಟಣಕ್ಕೆ ಅವರು ಬಂದರು. "ಅವರು ಕಪೆರ್ನೌಮಿಗೆ ಬಂದಾಗ ತೆರಿಗೆಯನ್ನು ಎತ್ತುವವರು ಪೇತ್ರನ ಬಳಿಗೆ ಬಂದು, ನಿಮ್ಮ ಬೋಧಕನು ತೆರಿಗೆಯನ್ನು ಸಲ್ಲಿಸುವುದಿಲ್ಲವೇ ಎಂದು ಕೇಳಲು ಹೌದು ಸಲ್ಲಿಸುವನು ಅಂದನು?" (ವಚನ 24).

ಗ್ರೀಕ್ ವೇದಭಾಗದಲ್ಲಿ ಸರಳವಾಗಿ, "ಎರಡು ಡ್ರಚಮಾ"[12] ಎಂದಿದೆ. ಗ್ರೀಕ್ ನಾಣ್ಯವಾದ ಡ್ರಚಮಾ[13] ನಮ್ಮ ಅಧ್ಯಯನದಲ್ಲಿ ನಮಗೆ ಲಭ್ಯವಿರುವ ರೋಮದ ದಿನಾರಿಗೆ ಸಮಾರಾಗಿ ಸಮಾನವಾದದ್ದು ಆಗಿದ್ದು (ನೋಡಿ ಲೂಕ 7:41; ಯೋಹಾನ 6:7) - ಇದು ಸಾಮಾನ್ಯ ಕೆಲಸಗಾರನ ಒಂದು ದಿನದ ಕೂಲಿಯು ಆಗಿತ್ತು[14] (ಮತ್ತಾಯ 20:2).

ಮುಂದಿನ ಮೂಲ ಭಾಗದಲ್ಲಿ, "ತೆರಿಗೆ" ಎಂಬ ಪದವು ವಚನ 24ರಲ್ಲಿ ಕಂಡುಬರುವುದಿಲ್ಲ, ಆದರೆ ಯೇಸು ಆ ಪದವನ್ನು ವಚನ 25ರಲ್ಲಿ ಬಳಸಿದ್ದಾನೆ. ಈ ಪ್ರಶ್ನೀತವಾದ ತೆರಿಗೆಯು ದೇವಾಲಯದ ತೆರಿಗೆ ಆಗಿದೆ.[15] ಇಪ್ಪತ್ತು ವರ್ಷದವ ಅಥವಾ ಅದಕ್ಕಿಂತ ಹೆಚ್ಚಿನ, ಪ್ರತಿಯೊಬ್ಬ ಯೆಹೂದಿ ಗಂಡಸು ದೇವಾಲಯದ ಸಂರಕ್ಷಣೆಗಾಗಿ ಮತ್ತು ಆರಾಧನೆಯ ವೆಚ್ಚಕ್ಕಾಗಿ ಅರ್ಧ ಶೆಕಲ್‌ನ್ನು ಕೊಡಬೇಕು ಎಂಬದು ಮೋಶೆಯ ಧರ್ಮಶಾಸ್ತ್ರದಲ್ಲಿ ಸೂಚಿತವಾಗಿತ್ತು (ವಿಮೋಚನಕಾಂಡ 30:11-16; ನೋಡಿರಿ 2 ಅರಸು 12:12; 2 ಪೂರ್ವಕಾಲವೃತ್ತಾಂತ 24:5-9; ನೆಹಮೀಯ 10:32). ಶೆಕಲ್ ಇದು ನಾಲ್ಕು ದಿನಾರು ಅಥವಾ ನಾಲ್ಕು ಡ್ರಚಮಾಗೆ ಸಮಾನವಾಗಿದ್ದು ಅರ್ಧ ಶೆಕಲ್, ಎರಡು ದಿನಾರು ಅಥವಾ ಡ್ರಚಮಾ ಆಗಿತ್ತು.

ರೋಮಾಪುರ ತೆರಿಗೆ ಸಂಗ್ರಾಹಕರಿಗಿಂತ ಬದಲಾಗಿ ತೆರಿಗೆಯ ಸಂಗ್ರಾಹಕರು ಇದ್ದು ಇವರು ಯೆಹೂದಿ ದೇವಾಲಯದ ಅಧಿಕಾರಿಗಳು ಆಗಿರುತ್ತಿದ್ದರು. ತೆರಿಗೆಯು ಸಾಮಾನ್ಯವಾಗಿ ವಸಂತದಲ್ಲಿ ಸಂದಾಯಮಾಡುವುದಾಗಿತ್ತು ಮತ್ತು ಈಗ ಅದು ಬೇಗನೇ ಬಂದಿತ್ತು; ಆದರೆ ಕೆಲ ತಿಂಗಳಿಂದ ಕ್ರಿಸ್ತನು ಕಪೆರ್ನೌಮಿನಲ್ಲಿ (ಆತನ "ವಾಸ ಸ್ಥಳ")

ಇಲ್ಲದ್ದರಿಂದಲೇ. ಈಗ ತೆರಿಗೆಯ ಸಂಗ್ರಾಹಕರು ಆತನು ಪಟ್ಟಣಕ್ಕೆ ಹಿಂತಿರುಗಿದ್ದನ್ನು ಕಂಡರು ಮತ್ತು ಆತನಿಗೆ ಎದುರು ನೋಡುವವರಾದರು. ಬಹುಶಃ ತುಂಬ ಬೇಕಾದ ಪಾಲನ್ನು ಅವರೂ ಹೊಂದಿರಬಹುದು; ಆದರೆ ಆತನನ್ನು ಆರೋಪಕ್ಕೊಳಪಡಿಸಲು ಆತನ ವಿರುದ್ಧ ಸಾಕ್ಷಿಯನ್ನು ಕಲೆಹಾಕಲು ಬಹುಶಃ ಆಸಕ್ತಿಯುಳ್ಳವರಾಗಿದ್ದರು.

ಕ್ರಿಸ್ತನು ಕಪೆರ್ನೌಮಿನಲ್ಲಿದ್ದಾಗ ಯಾವಾಗಲೂ ಪೇತ್ರನ ಮನೆಯಲ್ಲಿ ಇಳುಕೊಳ್ಳುತ್ತಿದ್ದನು (ನೋಡಿರಿ ಮಾರ್ಕ 1:29, 30; 2:1). ಆದ್ದರಿಂದ ಅಧಿಕಾರಿಗಳು ಆತನನ್ನು ಹುಡುಕಲು ಅಲ್ಲಿಗೆ ಹೊರಟರು. ಮನೆಯ ಹೊರಗೆ ಪೇತ್ರನನ್ನು ವಿಚಾರಿಸುತ್ತಾ,[16] ಅವರು “ನಿಮ್ಮ ಬೋಧಕರು ಎರಡು ದ್ರಚಮಾ ತೆರಿಗೆಯನ್ನು ಸಲ್ಲಿಸುದಿಲ್ಲವೇ” (ಮತ್ತಾಯ 17:24ಬಿ) ಎಂದು ಕೇಳಿದರು. ಆ ಅಪೊಸ್ತಲನು ಸ್ವಲ್ಪವೂ ತಡವರಿಸದೆ “ಹೌದು ಸಲ್ಲಿಸುವನು” ಅಂದನು (ವಚನ 25ಎ). ಬಹುಶಃ ಆತನು ಹೀಗೆ ಹೇಳಿರಬಹುದು “ಹೌದು, ಯಾಕೆಂದರೆ ಈ ಹಿಂದೆ ಕರ್ತನು ತೆರಿಗೆಯನ್ನು ತುಂಬಿದ್ದಾನೆ” ಎಂದು ಹೇಳಿರಬಹುದು. ಬಹುಶ ಕ್ರಿಸ್ತನು ಧರ್ಮಶಾಸ್ತ್ರಕ್ಕೆ ವಿಧೇಯರಾಗಬೇಕು ಎಂದು ಕಲಿಸಿದ್ದ ಕಾರಣದಿಂದಲೂ ಇರಬಹುದು.

ಅನೇಕ ಬಾರಿ ಪೇತ್ರನು ಮಾಡುವ ಹಾಗೆ ಈ ಬಾರಿಯೂ ಕೂಡಾ ಆತನು ತನ್ನ ಮನದಲ್ಲಿ ಮೊದಲು ಬಂದದ್ದನ್ನು ಕೂಡಲೇ ಹೇಳಿದನು. ಪೇತ್ರನ ಕಾರಣವು ಏನೇ ಇರಲಿ, ಏನು ಸಂಭವಿಸಬಲ್ಲದು ಎಂಬುದನ್ನು ಬಲ್ಲವನಾದ ಕರ್ತನು ಅಪೂರ್ವವಾದ ಪಾಠವನ್ನು ಕಲಿಸಲು ಅದನ್ನು ಒಂದು ಅವಕಾಶದಂತೆ ಕಂಡನು. “ಪೇತ್ರನು ಮನೆಯೊಳಕ್ಕೆ” ಬರುವ ಮುಂಚೆಯೇ ಆ ಘಟನೆಗೆ ಸಂಬಂಧಿಸಿದಂತೆ ಒಂದು ಅವಕಾಶ ಆತನಿಗೆ ಸಿಕ್ಕಿತು, “ಸೀಮೋನಾ ನಿನಗೆ ಹೇಗೆ ತೋರುತ್ತದೆ? ಭೂಲೋಕದ ಅರಸರು ಸುಂಕವನ್ನಾಗಲಿ ಮಂಡೇ ತೆರಿಗೆಯನ್ನಾಗಲಿ ಯಾರಿಂದ ತೆಗೆದುಕೊಳ್ಳುತ್ತಾರೆ? ತಮ್ಮ ಮಕ್ಕಳಿಂದಲೂ? ಬೇರೆಯರಿಂದಲೋ?” ಎಂದು ಕೇಳಿ ದನು (ವಚನ 25ಬಿ). ಪೇತ್ರನಿಗೆ ಈ ಪ್ರಶ್ನೆಯಿಂದ ಯಾವುದೇ ತೊಂದರೆಯಿರಲಿಲ್ಲ. ಅದಕ್ಕಾತನು “ಬೇರೆಯವರಿಂದ” (ವಚನ 26ಎ) ಎಂದು ಉತ್ತರಿಸಿದನು. ನಂತರ ಯೇಸು ಅದಕ್ಕೆ ಪ್ರತಿಯಾಗಿ, “ಹಾಗಾದರೆ ಮಕ್ಕಳು ಅದಕ್ಕೆ ಒಳಗಾದವರಲ್ಲ” (ವಚನ 26ಬಿ) ಎಂದು ಹೇಳಿದನು. ಒಂದು ನಿಶ್ಚಿತವಾದ ಸೂಚನೆ ಎಂದರೆ, (ದೇವರು) ದೇವ ಕುಮಾರನಾದ, ಕ್ರಿಸ್ತನು ತನ್ನ ತಂದೆಯ ಮನೆಯಲ್ಲಿ (ದೇವಾಲಯದಲ್ಲಿ)[17] ಹೊರತಾದವನಾಗಿದ್ದಾನೆ. ಇನ್ನೊಂದು ರೀತಿ ಯಲ್ಲಿ ಇಡುವುದಾದರೆ, ತೆರಿಗೆಯನ್ನು ತುಂಬದೆ ಇರುವುದಕ್ಕೆ ಆತನಿಗೆ ಹಕ್ಕು ಇದೆ, ಆದರೆ ಶಿಷ್ಯರು ಆತನ ಹಕ್ಕುಗಳ ಮೇಲೆ ಒತ್ತಾಯ ತರಬಾರದು ಎಂಬುದು ಪೇತ್ರನಿಗೆ ಕಲಿಯುವದು ಅವಶ್ಯವಿತ್ತು, ಹಾಗೆ ಮಾಡುವ ಮೂಲಕ ಆತನು ತನ್ನ ಒಡೆಯನನ್ನು ನೋಯಿಸಿದನು.

ಯೇಸು ಮುಂದುವರೆಸುತ್ತಾ, “ಆದರೂ ನಮ್ಮ ವಿಷಯವಾಗಿ ಅವರು ಬೇಸರ ಗೊಳ್ಳಬಾರದು. ನೀನು ಸಮುದ್ರಕ್ಕೆ ಹೋಗಿ ಗಾಳಾ ಹಾಕಿ[18] ಮೊದಲು ಸಿಕ್ಕುವ ಮೀನನ್ನು ಎತ್ತು; ಅದರ ಬಾಯಿತೆರೆದು ನೋಡಿದರೆ ಅದರಲ್ಲಿ ಒಂದು ರೂಪಾಯಿ ಸಿಕ್ಕುವದು; ಅದನ್ನು ತೆಗೆದುಕೊಂಡು ನಮ್ಮಿಬ್ಬರದಂತೆ ಹೇಳಿ ಅವರಿಗೆ ಕೊಡು ಎಂದು ಹೇಳಿದನು” (ವಚನ 27). Richard Rogers ರವರು ಹೀಗೆ ಬರೆಯುತ್ತಾರೆ, “ಇದೆಂಥಾ ವಿಪರ್ಯಾಸ! ಒಬ್ಬ ಅರಸನೂ ಬಡತನದ ಹೊಡೆತಕ್ಕೊಳಗಾದನೂ ಇಬ್ಬರೂ ದೇವಾಲಯದ ವಾರ್ಷಿಕ ತೆರಿಗೆಯಾದ ಕೇವಲ ಅರ್ಧ ಶೆಕಲ್‌ನ್ನು ಪಾವತಿಸಬೇಕು”[19] ಶೆಕಲ್‌ಗೆ ಗ್ರೀಕ್‌ಪದದ ಭಾಷಾಂತರದ ಸೆಟರ್ ಎಂದಿದ್ದು, ಇದ್ದು ಗ್ರೀಕ್ ನಾಣ್ಯವಾದ ನಾಲ್ಕು ದ್ರಚಮಾಕ್ಕೆ ಸಮಾನವಾದದ್ದಾಗಿದೆ[20] - ಹಾಗೆಯೇ ಇಬ್ಬರು ದೇವಾಲಯದ ತೆರಿಗೆ ಕಟ್ಟಲು ಸಾಕಾಗುವುದಾಗಿದೆ.

ಕ್ರಿಸ್ತನಿಂದ ಪ್ರಾಯೋಜಿಸಲಾದ ಅದ್ಭುತಕಾರ್ಯಗಳು ಅದ್ವಿತೀಯವಾಗಿದ್ದವು. ಹಣದ ಬಗೆಗಿನ ಅದ್ಭುತಕಾರ್ಯ ಇದೊಂದೇ ಆಗಿದ್ದು, ಆತನಿಗೆ ವೈಯಕ್ತಿಕವಾಗಿ ಪ್ರಯೋಜನವಾ ದದ್ದು ಇದೊಂದೇ ಒಂದು, ಮತ್ತು ಪರಿಣಾಮವನ್ನು ನಮಗೆ ಹೇಳದಂತಹ ಒಂದೇ ಒಂದು ಅದ್ಭುತಕಾರ್ಯದ ಘಟನೆ ಇದಾಗಿದೆ, ಮತ್ತು ಯಾವುದೇ ಸಂಶಯವಿಲ್ಲದೆ ಇದೊಂದು

ಕರ್ತನ ಬಲವಾದ ಮಹತ್ಕಾರ್ಯ ಎಂದು ಹೇಳಬಹುದು. ನಿಶ್ಚಯವಾಗಿ, ಒಬ್ಬ *ಮೀನುಗಾರನು* ಏನನ್ನೂ ಯೋಚಿಸದೇ ಅದರ *ಬಾಯನ್ನು* ತೆರೆದನು ಆತನ ಸಮಸ್ಯೆಗೆ ಪರಿಹಾರವು *ಮೀನಿನ ಬಾಯಲ್ಲಿದೆ* ಎಂಬ ಯೇಸುವಿನ ಮಾತಿನಲ್ಲಿ ಹಾಸ್ಯದ ಲೇಪನ ಇರುವುದನ್ನು ನಾವು ನೋಡುತ್ತೇವೆ.

"ಜಾಗರೂಕರಾಗಿರಿ, ಹೇಗೋ ಅದರೂ ನಮ್ಮ ವಿಷಯವಾಗಿ ಅವರು ಬೇಸರಗೊಳ್ಳಬಾರದು" ಎಂಬ ಯೇಸುವಿನ ಸೂಚನೆಯಲ್ಲಿನ ಪ್ರಮುಖ ಮಾತುಗಳನ್ನು ಮಂಕುಮಾಡದಂತೆ ಅದ್ಭುತಕಾರ್ಯಗಳ ನವೀನತೆಯನ್ನು ಬಿಟ್ಟುಬಿಡದಿರಿ ಎಂದಿದೆ. ಗ್ರೀಕ್ ಪದದ "ಮನನೋಯಿಸದೆ" ಎಂಬ ಪದದ ಭಾಷಾಂತರವು "ಮಸಿಬಳಿ" ಎಂಬುದರಿಂದ ನಾವು ಪಡೆಯುತ್ತೇವೆ. ಕ್ರಿಸ್ತನು ಅಧಿಕಾರಿಗಳ ಸಹೃದಯತೆಯನ್ನು ರೇಗಿಸುವ ಬಗ್ಗೆ ಯೋಚಿಸುತ್ತಿಲ್ಲ; ಆತನು ತನ್ನ ಸೇವೆಯ ಮೇಲೆ ವಿರುದ್ಧದ ಬೆಳಕು ಬೀಳುವುದಕ್ಕೆ ಆತನು ಯೋಚಿಸುವವನಾಗಿದ್ದನು. ಒಬ್ಬನ ಹಕ್ಕುಗಳ ಮೇಲೆ ಒತ್ತಾಯದ ಪ್ರಾಧಾನ್ಯತೆಯು ಸರಿಯೇ ಎಂಬುದನ್ನು ಪೇತ್ರನು ಅರ್ಥಮಾಡಿಕೊಳ್ಳಬೇಕೆಂದು ಆತನು ಬಯಸಿದ್ದನು.

ಈ ವಿಚಾರವು "ಕಠಿಣವಾದ ಮಾತು" ಆಗಿದೆ (ಯೋಹಾನ 6:60; KJV) ನಮ್ಮ ಹಕ್ಕುಗಳ ಮೇಲೆ ಒತ್ತಾಯ ತರುವದು ಸಹಜವಾದದ್ದು ಆಗಿದೆ. ನಾವು ಹೊಂದಬೇಕಾದದ್ದನ್ನು ಪಡೆಯಲು ನಾವು ಬೇಡಿಕೆ ಇಡುವವರಾಗಿದ್ದೇವೆ. ಯೋಗ್ಯವಾಗಿ ನಮ್ಮದಾಗಿರುವುಂಥದ್ದನ್ನು ನಮ್ಮಿದ ತೆಗೆದುಬಿಡುವಂಥದ್ದು ಯಾರೇ ಆಗಲಿ ಅವರನ್ನು ನಾವು ವಿರೋಧಿಸುವವರಾಗಿದ್ದೇವೆ. ನಮ್ಮ ಕೃತಿಯು ಹೇಗೆ ಆತನ ಕಾರಣಗಳಿಗೆ ಪರಿಣಾಮ ಬೀರಿರಬಹುದು ಎಂಬುದನ್ನು ಯಾವಾಗಲೂ ಪರಿಗಣಿಸುವವರಾಗಿದ್ದು ನಮ್ಮ ಸ್ವಾಭಾವಿಕ ಇಚ್ಛೆಗಳಿಂದ ಮೇಲೆಕ್ಕೆ ಏಳಲು ಯೇಸು ಕರೆಕೊಡುವವನಾಗಿದ್ದಾನೆ. ನಮ್ಮ ವೇದಭಾಗದ ಪದವನ್ನು ಬಯಸುವುದಕ್ಕಾಗಿ ನಮ್ಮ ಹಕ್ಕುಗಳ ಮೇಲೆ ಒತ್ತುಕೊಡುವದು ಕ್ರಿಸ್ತ ಕಾರಣಕ್ಕೆ "ಒಂದು ಕಳಂಕವನ್ನು" ಸೃಷ್ಟಿಸುವುದಾಗಿರುವುದಾದರೆ ನಾವು ನಮ್ಮ ಹಕ್ಕುಗಳನ್ನು ಮರೆಯಬೇಕು.

ಯೇಸು ಕೇವಲ ಈ ತರದ ಸ್ವಮರೆಯುವಿಕೆಯನ್ನು ಬೋಧಿಸುತ್ತಿಲ್ಲ; ಆತನು ಅದರಲ್ಲಿ ಜೀವಿಸಿದನು. ಆತನು ಇಹಲೋಕದ ಸೇವಾವಧಿಯಲ್ಲಿ ಈ ಪ್ರಾಯೋಗಿಕವನ್ನು ನಾವು ನೋಡಿದ್ದೇವೆ: ಯೋಹಾನನಿಂದ ದೀಕ್ಷಾಸ್ನಾನಮಾಡಿಸಿಕೊಳ್ಳದೆ ಇರುವ ಹಕ್ಕನ್ನು ಆತನು ಹೊಂದಿದ್ದನು ಯಾಕೆಂದರೆ ಆತನು "ಪಾಪವಿಲ್ಲದವನಾಗಿದ್ದನು" (ಇಬ್ರಿಯ 4:15; ನೋಡಿರಿ ಮತ್ತಾಯ 3:14), ಆದರೆ ಆತನು "ನೀತಿವಂತಿಕೆಯನ್ನು ಪರಿಪೂರ್ಣಗೊಳಿಸಲು" ಆತನು ಆ ಹಕ್ಕನ್ನು ಬಿಟ್ಟುಬಟ್ಟನು (ಮತ್ತಾಯ 3:15). ಕ್ರಿಸ್ತನ ಸೇವೆಯ ಅಂತ್ಯದಲ್ಲಿ ನಾವು ಈ ಪ್ರಾಯೋಗಿಕವನ್ನು ನೋಡಬಹುದು: ಆತನು ಮರಣಕ್ಕೆ ಯೋಗ್ಯವಾದದ್ದೇನೋ ಮಾಡದ್ದರಿಂದ ಆತನಿಗೆ ಮರಣದ ಅವಶ್ಯಕತೆ ಇರಲಿಲ್ಲ (ಲೂಕ 23:4), ಆದರೆ ನಾವು ರಕ್ಷಿಸಲ್ಪಡಬೇಕೆಂದು ಆತನು ಆ ಹಕ್ಕನು ಬಿಟ್ಟು ಕೊಟ್ಟನು (1 ಕೊರಿಂಥ 15:3).

ನಿಜ ಶಿಷ್ಯನು ತನ್ನ ಹಕ್ಕುಗಳ ಬಗೆಗೆ ಬಹುವಾಗಿ ಯೋಚಿಸದೆ ಕರ್ತನು ಮಹಿಮೆ ಹೊಂದುವನ್ನು ನೋಡುವುದನ್ನೂ ಮತ್ತು ಆತನ ತತ್ವಗಳು ವೃದ್ಧಿಹೊಂದುವುದರ ಬಗೆಗೆ ಯೋಚಿಸುವವನಾಗಿರುತ್ತಾನೆ![21]

## ಕರ್ತನ ಕಾರ್ಯಗಳನ್ನು ಪ್ರೋತ್ಸಾಹಿಸಿರಿ ಹೊರತು ನಿಮ್ಮ ಸ್ವಂತ ಸಂಗತಿಗಳಲ್ಲ (ಮತ್ತಾಯ 18:1-14; ಮಾರ್ಕ 9:33-50; ಲೂಕ 9:46-50)

ಸ್ವಲ್ಪ ಹೊತ್ತಿಗೆ ಮುಂಚೆ, ಯೇಸು ತಾನು ಕಟ್ಟಲಿರುವ ಮೆಸ್ಸೀಯನ ರಾಜ್ಯವು ಸಭೆಯೇ ಎಂದು ತಿಳಿಸಿಕೊಟ್ಟನು (ಮತ್ತಾಯ 16:18, 19). ತನ್ನ ರಾಜ್ಯವು, ಐಹಿಕವಾದದ್ದಲ್ಲ, ದೈಹಿಕವಾದದ್ದಲ್ಲ, ಅಥವಾ ರಾಜಕೀಯವಾದದ್ದೂ ಅಲ್ಲ ಆತ್ಮೀಕವಾದದ್ದು ಎಂದು ತನ್ನ

ಹಿಂಬಾಲಕರಲ್ಲಿ ಆ ಭಾವನೆ ಬಿತ್ತಲು ನಿರಂತವಾಗಿ ಪ್ರಯತ್ನಿಸಿದನು. ಅದು ಮನುಷ್ಯನ ಹೃದಯಗಳಲ್ಲಿ ನೆಲಸಿರುವುದು ಆಗಿದೆ ಹೊರತು ನಕಾಶೆಗಳಲ್ಲಿ ಅಲ್ಲ. ಆತನ ಶಿಷ್ಯರು ಈ ಸತ್ಯವನ್ನು ಗ್ರಹಿಸುವಲ್ಲಿ ವಿಫಲರಾದರು. ನಂತರದಲ್ಲಿ ದಾಖಲಿತವಾದ ಘಟನೆಯಲ್ಲಿ ಅರಿತು ಕೊಳ್ಳುವಿಕೆಯಲ್ಲಿನ ಅವರ ಕೊರತೆಯು ವ್ಯಕ್ತವಾಗುವುದಾಗಿದೆ.

ಒಂದು ದಿನ, ಅವರು ಪ್ರಯಾಣಿಸುತ್ತಿದ್ದಂತೆ, "ದೇವರ ರಾಜ್ಯದಲ್ಲಿ" "ತಮ್ಮಲ್ಲಿ ಯಾವನು ಹೆಚ್ಚಿನವನಾಗುವನು" ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಹನ್ನೆರಡು ಜನರಲ್ಲಿ ವಾದವು ಆರಂಭವಾಯಿತು (ಲೂಕ 9:46; ನೋಡಿರಿ ಮತ್ತಾಯ 18:1; ಮಾರ್ಕ 9:34). ಅವರ ವಾದವು ಯೇಸು ಪೇತ್ರನಿಗೆ ಮಾಡಿದಂತ ವಾಗ್ದಾನದಿಂದ ಪ್ರೇರಿತವಾಗಿರಬಹುದು (ಮತ್ತಾಯ 16:19) ಅಥವಾ ಕರ್ತನು ಕೇವಲ ಪೇತ್ರ ಯೋಹಾನ ಮತ್ತು ಯಾಕೋಬರನ್ನು ತನ್ನೊಡನೆ ಕರೆದುಕೊಂಡು ಹೋಗಿದ್ದರಿಂದಲೂ ಇರಬಹುದು (ಮತ್ತಾಯ 17:1). ನಮಗೆ ವಿವರಗಳು ಕೊಡಲ್ಪಟ್ಟಿಲ್ಲ, ಆದರೆ ಈ ವಾದದಲ್ಲಿ ಕರ್ತನು ಐಹಿಕ ರಾಜ್ಯದ ಸ್ಥಾನದಲ್ಲಿ ಎತ್ತರದಲ್ಲಿ ಪರಿಗಣಿಸಲ್ಪಟ್ಟಂಥ ಪೇತ್ರ, ಯಾಕೋಬ, ಯೋಹಾನರನ್ನು ಉಳಿದ ಯಾವುದೇ ಅಪೊಸ್ತಲರಿಂದ ಪ್ರತ್ಯೇಕಿಸುವದಕ್ಕೆ ಯಾವುದೇ ಕಾರಣವು ಇಲ್ಲ.[22]

ಅವರು ತಾವು ತಲುಪಬೇಕಾದ ಸ್ಥಳವನ್ನು ತಲುಪಿದ ಮೇಲೆ[23] ಕ್ರಿಸ್ತನು ಅವರಿಗೆ "ನೀವು ದಾರಿಯಲ್ಲಿ ಏನು ಮಾತಾಡಿಕೊಳ್ಳುತ್ತಿದ್ದಿರಿ?" ಎಂದು ಕೇಳಿದನು (ಮಾರ್ಕ 9:33). ಮುಜುಗರದ ಕಾರಣದಿಂದ ಅವರು ಬಹುಶಃ ಮೊದಲು ಅವರು ಉತ್ತರಿಸಲಿಲ್ಲ (ಮಾರ್ಕ 9:34), ಹೇಗೋ, ನಿಶ್ಚಿತವಾಗಿ, ಅವರು ಚರ್ಚೆಮಾಡುತ್ತಿರುವುದನ್ನು ನಿಖರವಾಗಿ ತಿಳಿದಾಗ (ಲೂಕ 9:47), ಅವರು "ಪರಲೋಕ *ರಾಜ್ಯದಲ್ಲಿ* ಯಾವನು ಹೆಚ್ಚಿನವನು?" ಎಂದು ಆತನನ್ನು ಕೇಳಿದರು (ಮತ್ತಾಯ 18:1; ಒತ್ತಿ ಹೇಳಿದ್ದು ನನ್ನದು).

**ಮಕ್ಕಳಿಗೆ ಸಂಬಂಧಿಸಿದಂತ ಮೂಲ ಪಾಠ**

J. W. McGarvey ರವರು ಹೀಗೆ ಬರೆಯುತ್ತಾರೆ, "ಪೇತ್ರನ ಆಧ್ಯತೆಯನ್ನು ಬೋಧಿಸಲು ಯೇಸು ಬಯಸಿರಬಹುದಾದ ಇದಕ್ಕಿಂತ ಉತ್ತಮ ಅವಕಾಶವು ಇರದಿರಬಹುದು."[24] ಬದಲಾಗಿ, ಕ್ರಿಸ್ತನು ಬಲು ಮುಖ್ಯವಾದದ್ದನ್ನು ಉತ್ತಮ ಅವಕಾಶವನ್ನು ಕಂಡುಕೊಂಡನು: "ಯಾವನಾದರೂ ಮೊದಲಿನವನಾಗಬೇಕೆಂದಿದ್ದರೆ ಅವನು ಎಲ್ಲರಲ್ಲಿ ಕಡೆಯವನೂ ಎಲ್ಲರ ಆಳೂ ಆಗಿರಬೇಕು" (ಮಾರ್ಕ 9:35; ಲೂಕ 9:48ಬಿ) ಎಂದು ಹೇಳಿದನು.

ಈ ಸಂದೇಶದಿಂದ ಮುಂದೆ ಹೋಗಲು, ಒಡೆಯನಾದ ಬೋಧಕನು ಸಜೀವ ಬೋಧನೋಪಕರಣವನ್ನು ಬಳಸಿದನು: "ಆತನು ಚಿಕ್ಕ ಮಗುವನ್ನು ಹತ್ತಿರಕ್ಕೆ ಕರೆದು[25] ಅವರ ನಡುವೆ ನಿಲ್ಲಿಸಿದನು" (ಮತ್ತಾಯ 18:2). "[ಆ ಮಗುವನ್ನು] ಅಪ್ಪಿಕೊಂಡು" (ಮಾರ್ಕ 9:36), ತನ್ನ ಶಿಷ್ಯರಿಗೆ ಹೀಗೆ ಹೇಳಿದನು, "ನೀವು ತಿರುಗಿಕೊಂಡು ಈ ಚಿಕ್ಕಮಕ್ಕಳಂತೆ ಆಗದೆ ಹೋದರೆ ನೀವು ಪರಲೋಕ ರಾಜ್ಯದಲ್ಲಿ ಸೇರುವುದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" (ಮತ್ತಾಯ 18:3, 4).

ಅನೇಕ ಸತ್ಯಾರ್ಥಗಳ ಕ್ರಿಸ್ತನ ಮಾತುಗಳಿಂದ ತೆಗೆದುಕೊಳ್ಳಬಹುದು. ಉದಾಹರಣೆಗೆ ಅಲ್ಪತನದ ಸಂಪೂರ್ಣ ವಂಶಾವಳಿಯ ತಾತ್ವಕಿದ ದೋಷಗಳನ್ನು ಅವರು ಹೊರಗೆಡಿವಿದರು: ಮಗುವು ಹುಟ್ಟಿದಾಗಲೇ ಅದು "ಸಂಪೂರ್ಣ ನೈತಿಕತ್ವ ಇಲ್ಲದ್ದಾಗಿರುತ್ತದೆ" ಯಾಕಂದರೆ ಅದಾಮನ ಪಾಪದಿಂದಲೇ ಎಂಬ ನಂಬಿಕೆಯಿಂದಲೇ. ದೇವರ ರಾಜ್ಯವನ್ನು ಪ್ರವೇಶಿಸಲು ನಾವು ಚಿಕ್ಕಮಕ್ಕಳಂತೆ ಆಗಬೇಕು ಎಂದು ಯೇಸು ಹೇಳಿದನು. ತಿರುಗಿ ಕರ್ತನು ಮಾತುಗಳು: ಒಂದು ಮಗು "ಅದು ಇದ್ದ ಹಾಗೆಯೇ" ದೇವರ ರಾಜ್ಯವನ್ನು ಪ್ರವೇಶಿಸಲು ಸಿದ್ಧವಾಗದೆ ಮತ್ತು ಆತನು ಹಾಗೆ ಮಾಡಲು ಯಾವ ಮಾನವ ನಿರ್ಮಿತ ಆಚಾರಗಳು ಅವಶ್ಯವಿಲ್ಲ ಎಂಬುದು ಶಿಶುವಿನ ದೀಕ್ಷಾಸ್ನಾನದ ಬಗೆಗಿನ ಮೂಢನಂಬಿಕೆಯನ್ನು ಎತ್ತು ತೋರಿಸುವುದಾಗಿದೆ.

ಸೇವೆಮಾಡಿಸಿಕೊಳ್ಳುವುದರ ಬದಲು ಸೇವೆಮಾಡುವ ಮನೋಭಿಲಾಷೆ ಇಂಥವುಗಳ ಮೂಲಕ ಕ್ರಿಸ್ತನು ಹೇಗೋ ತನ್ನ ದೃಷ್ಟಾಂತದಲ್ಲಿನ ಒಂದು ಸತ್ಯದ ಮೇಲೆ ಕೇಂದ್ರಿಕರಿಸುವವನಾಗಿದ್ದಾನೆ: ನಮ್ರತೆಯ ಅವಶ್ಯಕತೆ,[26] ಆ ದಿನಗಳಲ್ಲಿ ಚಿಕ್ಕಮಕ್ಕಳು ಸಮಾಜದ ಕೆಳಸ್ಥರಲ್ಲಿ ಇರುವವರಾಗಿದ್ದರು. ಇಂದು ಅವರು ಮೊದಲಿಗರಾಗಿದ್ದು ಸೇವೆ ಮಾಡಿಸಿಕೊಳ್ಳುವವರಾಗಿದ್ದಾರೆ, ಆ ದಿನಗಳಲ್ಲಿ, ಅವರು ಸಾಮಾನ್ಯವಾಗಿ ಕೊನೆಯವರಾಗಿರುತ್ತಿದ್ದರು. ಕರ್ತನು ತನ್ನ ರಾಜ್ಯದಲ್ಲಿ ಈ ರೀತಿಯಲ್ಲಿಯೇ ತಮ್ಮನ್ನು ತಾವು ಕೆಳಕ್ಕಿಳಿಸಿಕೊಳ್ಳಲು ಸಿದ್ಧಪಡಿಸಿಕೊಳ್ಳಲು ಒಪ್ಪುವವರಾಗುವ ಮೌಲ್ಯಯವನ್ನು ಹೊಂದಿರುವುದನ್ನು ಶಿಷ್ಯರು ನೋಡಬೇಕೆಂದು ಹೇಳಲು ಪ್ರಯತ್ನಿಸಿದನು.[27]

ನಮ್ರತೆಯ ಅವಶ್ಯಕತೆಯು ಹೊಸ ಒಡಂಬಡಿಕೆಯ ಯುದ್ದಕ್ಕೂ ಕಲಿಸಲ್ಪಟ್ಟಿದೆ.[28] ಪೌಲನು ಈ ರೀತಿ ಹೇಳಿದನು. "ಪಕ್ಷಪಾತದಿಂದಾಗಲಿ ... ಮಾಡದೆ ... ದೀನಭಾವದಿಂದ ಮತ್ತೊಬ್ಬರನ್ನು ತನಗಿಂತಲೂ ಶ್ರೇಷ್ಟರೆಂದು ಎಣಿಸಲಿ" (ಫಿಲಿಪ್ಪಿ 2:3). ಪೇತ್ರನು ಹೀಗೆ ಬರೆಯುತ್ತಾನೆ,

> ... ನೀವೆಲ್ಲರೂ ದೀನಮನಸ್ಸೆಂಬ ವಸ್ತ್ರದಿಂದ ಸೊಂಟಕಟ್ಟಿಕೊಂಡು ಒಬ್ಬರಿಗೊಬ್ಬರು ಸೇವೆ ಮಾಡಿರಿ. ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ. ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ.
>
> ಹೀಗಿರುವುದರಿಂದ ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ; ಆತನು ತಕ್ಕಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು (1 ಪೇತ್ರ 5:5, 6).

ಮೊದಲಿನವನಾಗಲು ನೀನು ಕೊನೆಯವನಾಗು! ಈ ತತ್ವವು ಮೊದಲ ಶತಮಾನದ ಕೇಳುಗರಿಗೆ ಅರ್ಥಮಾಡಿಕೊಳ್ಳುವದು ಕಷ್ಟಮಾಡಿಕೊಳ್ಳುವದು ಕಷ್ಟದಾಯಕವಾಗಿದ್ದು ಸ್ವೀಕರಿಸುವುದು ಬಲು ಕಡಿಮೆಯಾಗಿತ್ತು. ಇಂದಿನ ಸ್ವಉನ್ನತ್ತಿ ಮತ್ತು ಸ್ವಅಭಿವೃದ್ಧಿಯ ಗರ್ವಯುಕ್ತ ಜಗತ್ತಿನಲ್ಲಿ ಅವುಗಳು ಎರಡು ಪಟ್ಟು ಕ್ಲಿಷ್ಟಮಯವಾಗಿವೆ. ನೀವು ನನ್ನ ಹಾಗೆ ಇರುವುದಾದರೆ ಕ್ರಿಸ್ತನ ಮಾತುಗಳು ನಿನ್ನ ಹೃದಯದಲ್ಲಿ ಈ ರೀತಿ ಪ್ರಾರ್ಥಿಸಲು ಪ್ರೇರೇಪಿಸುವುದಾಗಿದೆ: "ದೇವರೇ, ಬಲು ನಮ್ರವಾಗಲು ನನಗೆ ಸಹಾಯಿಸು. ಹೆಚ್ಚು ಹೆಚ್ಚಾಗಿ ಮಗುವಿನಂತೆ ಇರಲು ನನಗೆ ಸಹಾಯಿಸು."

**ಮಕ್ಕಳಿಗೆ ಸಂಬಂಧಿಸಿದ ಎರಡನೆಯ ಪಾಠ**

ಯೇಸುವಿನ ದೃಕ್ ಪ್ರಾಯೋಜಕವು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಮಕ್ಕಳಿಗೆ ಸಂಬಂಧಿಸಿದ್ದು ವಿವಿಧ ಧಾರ್ಮಿಕ ಬೋಧನೆಗಳನ್ನು ಪರಿಚಯಿಸುವುದರ ಜೊತೆಯಿರುವುದಾಗಿದೆ (ಮತ್ತಾಯ 18:5-14; ವಿಶೇಷವಾಗಿ ವಚನಗಳು 5, 6, 10, ಮತ್ತು 14ನೇ ವಚನಗಳನ್ನು ಗಮನಿಸಿರಿ). ಸಂದೇಶವು ಮುಂದುವರೆದಂತೆ, "ಚಿಕ್ಕ ಮಕ್ಕಳ" ಎಂಬ ಪದವು ವಿವರಿಸಲ್ಪಡುತ್ತಾ ಇದು ಕೇವಲ ಮಕ್ಕಳನ್ನು ಒಳಗೊಂಡಿಲ್ಲ, ಆದರೆ ಶಿಷ್ಯರ ಮಕ್ಕಳ ಹಾಗಿನ ನಂಬಿಕೆಯನ್ನು ಒಳಗೊಂಡಿದೆ[29] (ಬಹುಶಃ ಹೊಸ ಒಡಂಬಡಿಕೆಯ ಮೇಲೆ ವಿಶೇಷ ಒತ್ತುಕೊಡುವಿಕೆಯೂ ಸಹ ಇದೆ). ಹೆಚ್ಚಿನ ಪಾಠಗಳು ಚಿಕ್ಕಮಕ್ಕಳು ಮತ್ತು ಮಕ್ಕಳ ಹಾಗಿರುವ ಶಿಷ್ಯರಿಗೆ ಸಮಾನವಾಗಿ ಅನ್ವಯಿಸುವವು ಆಗಿವೆ.

*ಚಿಕ್ಕವರಂತೆ ಪಡಕೊಳ್ಳುವದು (ಮತ್ತಾಯ 18:5; ಮಾರ್ಕ 9:37; ಲೂಕ 9:48-50).* ಕ್ರಿಸ್ತನು ತನ್ನ ಪ್ರಸಂಗದ ಈ ಭಾಗವನ್ನು "ಚಿಕ್ಕವರಂತೆ" ಇರುವವರಿಗೆ ಪ್ರವೇಶವಿದೆ ಎಂದು ಹೇಳುವ ಮೂಲಕ ಆರಂಭಿಸಿದ್ದಾನೆ: "ಯಾವನಾದರೂ ನನ್ನ ಹೆಸರಿನಲ್ಲಿ ಇಂಥ ಚಿಕ್ಕಮಕ್ಕಳಲ್ಲಿ ಒಂದನ್ನು ಸೇರಿಕೊಂಡರೆ ನನ್ನನ್ನೂ ಸೇರಿಸಿಕೊಂಡ ಹಾಗಾಯಿತು; ಮತ್ತು ಯಾವನಾದರೂ ನನ್ನನ್ನು ಸೇರಿಸಿಕೊಂಡರೆ ನನ್ನನ್ನಲ್ಲ ನನ್ನನ್ನು ಕಳುಹಿಸಿ ಕೊಟ್ಟಾತನನ್ನೇ ಸೇರಿಕೊಂಡ

ಹಾಗಾಯಿತು" (ಮಾರ್ಕ 9:37).[30] ಚಿಕ್ಕ ಮಕ್ಕಳು ವಿಶೇಷವಾಗಿರುತ್ತಾರೆ. ಪ್ರತಿಯೊಬ್ಬರಲ್ಲಿಯೂ ಇರುವ ಒಳ್ಳೆಯದಕ್ಕಾಗಲಿ ಅಥವಾ ಕೆಟ್ಟದ್ದಕ್ಕಾಗಲೀ ಇರುವ ಸಂಭವನೀಯತೆಯು ಶ್ರೇಷ್ಟವಾಗಿರುತ್ತದೆ. ಇದು ತಾಳಿಕೊಳ್ಳಲೇಬೇಕಾದ ತರಲೆ ಎಂದು ನಾವು ಎಂದಿಗೂ ಯೋಚಿಸಬಾರದು. ನಾವು ಅವರನ್ನು ಪ್ರೀತಿಸಬೇಕು, ಪೋಷಿಸಬೇಕು, ಮತ್ತು ಅವರನ್ನು ಸಂರಕ್ಷಿಸಲು ಪ್ರಯತ್ನಿಸಬೇಕು. ನಾವು ಅವರಿಗೆ ಬೇರೆಯವರಿಗೆ ಉತ್ತಮ ಉದಾಹರಣೆಯಾಗಿರುವ ಅವಕಾಶವಾಗಿರುವುದನ್ನು ನೋಡಬೇಕು. ನಾವು ಅವರಿಗೆ ಎಲ್ಲವನ್ನೂ ಮಾಡಬಹುದು ನಾವು ಅವರಿಗೆ ಬೋಧಿಸಬಹುದು ಮತ್ತು ಸರಿಯಾದ ಮಾರ್ಗಕ್ಕಾಗಿ ತರಬೇತುಗೊಳಿಸಬಹುದು (ಜ್ಞಾನೋಕ್ತಿ 22:6).

ಜನರನ್ನು "ಸ್ವೀಕರಿಸುವ"ದರ ಕುರಿತು ಯೇಸುವಿನ ಮಾತುಗಳು ಮತ್ತು "ನನ್ನ ಹೆಸರಿನಲ್ಲಿ" ಎಂಬ ಪದದ ಬಳಿಕೆಯನ್ನು ಯೋಹಾನನ ಸಮಯದಲ್ಲಿ ಕ್ರಿಸ್ತನ ಹೆಸರಿನಲ್ಲಿ ಕೆಲಸಮಾಡದೆ ಇರುವ ಅದುತ್ತೀಚಿನ ಘಟನೆಯನ್ನು ಸಂಬಂಧಿಸಿದ್ದಂಥದ್ದನ್ನು ನೆನಪಿಸಿಕೊಳ್ಳುತ್ತಾನೆ. ವಿದ್ಯಾರ್ಥಿಗಳಾದವರು ಕೆಲಸಾರಿ ಹೀಗೆ ಮಾಡುವು, ಆತನು (ಯೋಹಾನನು) ತನ್ನ ಗುರುವಿನ ಮಾತಿನ ಮಧ್ಯ ಪ್ರವೇಶಿಸಿ: "ಗುರುವೇ ಯಾವನೋ ಒಬ್ಬನು ನಿನ್ನ ಹೆಸರನ್ನು ಹೇಳಿ ದೆವ್ವಬಿಡಿಸುವುದನ್ನು ನಾವು ಕಂಡು ಅವನು ನಮಗೆ ಸೇರಿದವನಲ್ಲವಾದ್ದರಿಂದ ಅವನಿಗೆ ಅಡ್ಡಿ ಮಾಡಿದೆವು" (ಲೂಕ 9:49) ಎಂದು ಹೇಳಿದನು.

"ಯಾವನೋ ಒಬ್ಬ" ಯಾರನ್ನು ಯೋಹಾನನು ಇಲ್ಲಿ ಸೂಚಿಸುತ್ತಿದ್ದಾನೆ? ವೇದಭಾಗವು ಇದರ ಬಗೆಗೆ ಏನನ್ನೂ ಹೇಳದು. ಆ "ಯಾರೋ ಒಬ್ಬನು" ದೆವ್ವಗಳನ್ನು ಬಿಡಿಸುತ್ತಿದ್ದಾನೆ, ಪ್ರತ್ಯಕ್ಷವಾಗಿ ಆತನು ನಟನೆಯಮಾಡುವವನಲ್ಲ, ನಂತರದಲ್ಲಿ ಕೆಲವರು ದುರಾತ್ಮಗಳನ್ನು ಓಡಿಸುವಲ್ಲಿ ಯೇಸುವಿನ ಹೆಸರನ್ನು ಬಳಸಲು ಪ್ರಯತ್ನಿಸಿದರು (ಅಪೊಸ್ತಲರ ಕೃತ್ಯಗಳು 19:13-16). ಯೇಸುವಿಗೆ ಹನ್ನೆರಡು ಶಿಷ್ಯರ ಹೊರತಾಗಿಯೂ ಇತರ ಶಿಷ್ಯರು ಇದ್ದರು ಎಂಬುದನ್ನು ಮನದಲ್ಲಿ ಇಟ್ಟುಕೊಳ್ಳಿರಿ (ಲೂಕ 6:13) ಮತ್ತು ಆತನ ಇಹಲೋಕದ ಸೇವೆಯ ಆರಂಭದಲ್ಲಿ ಕರ್ತನ ಅದ್ಭುತ ಕಾರ್ಯಗಳ ಶಕ್ತಿಯು ಅಪೊಸ್ತಲರಿಗೆ ಮಾತ್ರ ಕೊಡಲ್ಪಟ್ಟಿರಲಿಲ್ಲ (ನೋಡಿರಿ ಲೂಕ 10:1, 17).

ಯೋಹಾನನ ಹೇಳಿಕೆಯಲ್ಲಿನ ಮುಖ್ಯ ಪದಗಳು ಈ ರೀತಿಯಲ್ಲಿರಬಹುದು. "... ಆತನು ನಮ್ಮ ಜೊತೆಯಲ್ಲಿ ಇರುವುದನ್ನು *ಅನುಸರಿಸುವದಿಲ್ಲ.*" ಇನ್ನೊಂದು ಮಾತಿನಲ್ಲಿ ಆತನ ಕರ್ತನೊಡನೆ ಪ್ರಯಾಣ ಮಾಡುತ್ತಿರುವ ಹನ್ನೆರಡು ಜನ ಅಪೊಸ್ತಲರಲ್ಲಿ ಈತನೂ ಒಬ್ಬನಲ್ಲ ಎಂದಾಗಿರಬಹುದು. ಇಲ್ಲಿ ಉದ್ಭವಿಸಿದ ಈ ಚರ್ಚೆಯು ಅಪೊಸ್ತಲರ ಹೊಟ್ಟೆಕಿಚ್ಚಿನ ಮತ್ಸಾಕಾಂಕ್ಷೆಯಿಂದಲೇ ಎಂಬುದನ್ನು ನೆನಪಿಡಿರಿ. ಈ ಹನ್ನೆರಡು ಜನರು ಯೇಸುವಿನ ಇತರ ಶಿಷ್ಯರೊಂದಿಗೆ ಅಂದರೆ ಸ್ವಲ್ಪ ಸಮಯದ ಮುಂಚೆ ಏನನ್ನೂ ಮಾಡಲು ಅಸಮರ್ಥವಾಗಿದ್ದು ಈಗ ತಾವು ಮಾಡುವುದರ ಮೇಲೆ ನಂಬಿಕೆಯಿಟ್ಟವರು ಅಪೊಸ್ತಲರಲ್ಲದವರ ಆಗಿದ್ದರು (ಮತ್ತಾಯ 17:16, 19, 20).

ಯೇಸು ಯೋಹಾನನಿಗೆ ಉತ್ತರಿಸುತ್ತಾ "ಅವನಿಗೆ ಅಡ್ಡಿಮಾಡಬೇಡಿರಿ; ನನ್ನ ಹೆಸರಿನ ಮೇಲೆ ಮಹತ್ತನ್ನು ಮಾಡಿ ಏಕಾಏಕಿ ನನ್ನನ್ನು ದೂಷಿಸುವವನು ಒಬ್ಬನೂ ಇಲ್ಲ. ನಮ್ಮನ್ನು ಎದುರಿಸುವವನು ನಮ್ಮ ಪಕ್ಷದವನೇ" (ಮಾರ್ಕ 9:39, 40) ಎಂದು ಹೇಳಿದನು. ಕರ್ತನ ಮುಖ್ಯವಾದ ವಿಷಯವು ಸ್ಪಷ್ಟವಾಗಿದೆ. ಇದರ ಪ್ರಕಾರ ಆತನು "ನಾವು ಪಡೆಯಬಹುದಾದ ಎಲ್ಲಾ ಸ್ನೇಹಿತರ ಅವಶ್ಯಕತೆಯು ನಮಗೆ ಇದೆ. ಹೀಗೆ ಅನೇಕರು ನನ್ನನ್ನು ದೂಷಿಸುತ್ತಿದ್ದಾರೆ ಎಂಬುದರಲ್ಲಿ ಒಬ್ಬನು ಒಬ್ಬನು ಹಾಗೆ ಮಾಡುತ್ತಿಲ್ಲ ಎಂದು ತಿಳಿದು ಬರುವದು ಮುದಕೊಡುವಂಥದ್ದಾಗಿದೆ" ಎಂದಾಗಿರಬಹುದು.[31]

ದುರದೃಷ್ಟವಶಾತ್ ಕೆಲವರು "ನಮ್ಮನ್ನು ಎದುರಿಸುವವನು ನಮ್ಮ ಪಕ್ಷದವನೇ" ಎಂದು ವಚನ 40ನ್ನು ಬಳಸುವವರಾಗಿದ್ದು ಕ್ರಿಸ್ತನು ಯಾರೋಬ್ಬರು "ತನಗೋಸ್ಕರ" ಮತ್ತು ಆತನ

ಹೆಸರಿನಲ್ಲಿ ಒಳ್ಳೆಯ ಕಾರ್ಯಗಳನ್ನು ಮಾಡುವಂಥದ್ದನ್ನು ಪ್ರತಿಪಾದಿಸುವವನಾಗಿದ್ದಾನೆ ಎಂದು ಬೋಧಿಸುವವರಾಗಿದ್ದಾರೆ. ಆದ್ದರಿಂದ ಅವರು ಯೇಸುವಿನ ಆಜ್ಞೆಗಳನ್ನು ಸರಿಯೋ ತಪ್ಪೋ ಎಂದು ಒಪ್ಪಿಕೊಂಡರಲ್ಲದೇ ಆ ಪ್ರಕಾರ ನಾವೂ ಸಹ ಆ ವ್ಯಕ್ತಿಗಳಂತೆ ಒಪ್ಪಿಕೊಳ್ಳಬೇಕು ಎಂದು ಅವರು ಸೂಚಿಸುವವರಾಗಿದ್ದಾರೆ. ಆ ವ್ಯಾಖ್ಯಾನವು ಮತ್ತಾಯ 7:21-23 ವಚನಗಳಲ್ಲಿ ವಿರೋಧಾಭಾಸವನ್ನು ಉಂಟುಮಾಡುವುದಾಗಿದೆ:

> ನನ್ನನ್ನು ಸ್ವಾಮೀ ಸ್ವಾಮೀ, ಎನ್ನುವವರೆಲ್ಲರೂ ಪರಲೋಕ ರಾಜ್ಯದಲ್ಲಿ ಸೇರುವರೆಂದು ನೆನಿಸಬೇಡಿರಿ; ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕ ರಾಜ್ಯದಲ್ಲಿ ಸೇರುವನು. ಸ್ವಾಮೀ, ಸಾಮೀ, *ನಿನ್ನ ಹೆಸರಿನ ನಾವು ಬೋಧನೆ ಹೇಳಲಿಲ್ಲವೇ?* ನಿನ್ನ ಹೆಸರಿನ ಮೇಲೆ ದೆವ್ವಗಳನ್ನು ಬಿಡಿಸಲಿಲ್ಲವೇ? ನಿನ್ನ ಹೆಸರಿನ ಮೇಲೆ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲವೇ ಎಂದು ಆ ದಿನದಲ್ಲಿ ಎಷ್ಟೋ ಜನರು ನನಗೆ ಹೇಳುವರು. ಆಗ ನಾನು ಅವರಿಗೆ ನಾನೆಂದೂ ... ನಿಮ್ಮ ಗುರುತು ಕಾಣೆನು; ಧರ್ಮವನ್ನು ಮೀರಿ ನಡೆಯುವವರೇ ನನ್ನಿಂದ ತೊಲಗಿ ಹೋಗಿರಿ ಎಂದು ಎಲ್ಲರ ಮುಂದೆ ಹೇಳಿಬಿಡುವೆನು.

"ನನ್ನ ಪಕ್ಷಹಿಡಿಯದವನು ನನಗೆ ವಿರೋಧಿ; ನನ್ನ ಜೊತೆಯಲ್ಲಿ ಒಟ್ಟುಗೂಡಿಸದವನು ಚದುರಿಸುವವನಾಗಿರುತ್ತಾನೆ" (ಮತ್ತಾಯ 12:30) ಎಂದು ಕರ್ತನು ಇತ್ತೀಚೆಗೆ ಪ್ರಕಟಿಸಿದ ಸತ್ಯದ ಇನ್ನೊಂದೆಡೆ ಮಾರ್ಕ 9:40 ಇದೆ.[32] ಈ ಎರಡೂ ಪರಿಚ್ಛೇದಗಳನ್ನು ಒಂದರ ಬದಿಗೊಂದು ಇಟ್ಟಾಗ ಕ್ರಿಸ್ತನ ಬಗೆಗೆ ತಟಸ್ಥವಾಗಿ ಇರುವದು ಅಸಾಧ್ಯವಾದದ್ದು ಎಂದು ಪ್ರಕಟಿಸುವುದಾಗಿದೆ.

ಯೇಸು ಈಗ ತನ್ನ ಅಪೊಸ್ತಲರಿಗೆ ಅನ್ವಯಿಸದಂಥ ವಿಷಯವನ್ನು ಹೊರತು ಪಡಿಸಿ ಮಾರ್ಕ 9:41ರಲ್ಲಿನ ಸ್ವಾಗತಿಸುವ/ಸ್ವೀಕರಿಸುವ ವಿಷಯಕ್ಕೆ ತಿರಿಗಿಕೊಳ್ಳುತ್ತಾನೆ: "ನೀವು ಕ್ರಿಸ್ತನವರೆಂದು ನಿಮಗೆ ಯಾವನಾದರೂ ಒಂದು ತಂಬಿಗೆ ನೀರನ್ನು ಕುಡಿಯಲು ಕೊಟ್ಟರೆ ಬರತಕ್ಕ ಪ್ರತಿಫಲವು ತಪ್ಪುವುದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" (ಮಾರ್ಕ 9:41). ಕರ್ತನು ಆ ಹೇಳಿಕೆಯನ್ನು ಕೊಟ್ಟಾಗ, ಒಂದೇ ವಚನದಲ್ಲಿ ಮತ್ತು ಒಂದೇ ಕಾರ್ಯದಲ್ಲಿ ರಕ್ಷಣೆಗಾಗಿನ ಎಲ್ಲಾ ಅವಶ್ಯಕತೆಗಳನ್ನು ಕಟ್ಟಿಡುತ್ತಾ ಇಲ್ಲ. ಆತನು ನಂಬಿ ಮತ್ತು ದೀಕ್ಷಾಸ್ನಾನ ಹೊಂದುವ ಆಹ್ವಾನದ ಜೊತೆ ಕಾರ್ಯಮಾಡುವುದಾದರೆ (ಮಾರ್ಕ 16:15, 16; ಗಲಾತ್ಯ 3:26, 27); ನಾವು ಬಟ್ಟಲು ನೀರನ್ನು ಜನರಿಗೆ ಕೊಡುವವರೂ ಆಗಿದ್ದು ಮತ್ತು ಕ್ರೈಸ್ತರಿಗೆ ನೀರನ್ನು ಕೊಡಲು ಒತ್ತಾಯಿಸುವದರಲ್ಲಿ ಎಲ್ಲವೂ ಮುಗಿದು ಹೋಗುವುದಿಲ್ಲ. ಆತನ ಹೆಸರನ್ನು ಧರಿಸಿದವರನ್ನು ಪ್ರೋತ್ಸಾಹಿಸುವ ಜನರು ಇದ್ದಾಗ ದೇವರು ಸಂತೋಷಿಸುವವನಾಗಿದ್ದಾನೆ ಎಂದು ಯೇಸು ಸ್ಪಷ್ಟವಾಗಿ ಹೇಳುತ್ತಿದ್ದಾನೆ.

*ಚಿಕ್ಕವರಂತೆ ಪಡಕೊಳ್ಳುವದು (ಮತ್ತಾಯ 18:6-10; ಮಾರ್ಕ 9:42-50).* ನಂತರ ಕ್ರಿಸ್ತನು "ಚಿಕ್ಕವರ" ವಿಷಯಕ್ಕೆ ಮರಳುವವನಾಗಿದ್ದಾನೆ: "ಆದರೆ ನನ್ನಲ್ಲಿ ನಂಬಿಕೆಯಿಡುವ ಈ ಚಿಕ್ಕವರಲ್ಲಿ ಒಬ್ಬನಿಗೆ ಯಾವನಾದರೂ ಅಡ್ಡಿಯಾದರೆ ಅಂಥವನ ಕೊರಳಿಗೆ ಬೀಸುವ ಕಲ್ಲು ಕಟ್ಟಿ ಅವನನ್ನು ಆಳವಾದ ಸಮುದ್ರದಲ್ಲಿ ಮುಗಿಸಿಬಿಡೂವದು ಅವನಿಗೆ ಹಿತವಾಗುವದು" (ಮತ್ತಾಯ 18:6; ನೋಡಿರಿ ಮಾರ್ಕ 9:42). ಗ್ರೀಕ್ ಭಾಷೆಯ ಭಾಷಾಂತರವಾದ "ಬೀಸುವ ಕಲ್ಲು" ಇದು ಬೀಸುವ ಕಲ್ಲನ್ನು ಸೂಚಿಸುವುದಾಗಿದ್ದು ಇದು ದೊಡ್ಡದ್ದಾಗಿದ್ದು ಇದನ್ನು ಕತ್ತೆಗಳ ಮೂಲಕ ತಿರುಗಿಸುವವರಾಗಿದ್ದರು. ಅಂಥ ಭಾರವು ಸಮುದ್ರದ ಅಡಿಯಲ್ಲಿ ಎಳೆಯುವುದು ಎಂಥ ದುರಂತವಲ್ಲವೆ,[33] ಆದರೆ ಅದಕ್ಕಿಂತ ದೊಡ್ಡ ದುರಂತವೆಂದರೆ "ಚಿಕ್ಕವರನ್ನು" ಅಡ್ಡಿಮಾಡುವವನಿಗೆ ಇದು ಸಂಭವಿಸುವುದೇ ಆಗಿದೆ.

"ಚಿಕ್ಕವರು" ಎಂಬ ಪದವು ಮಕ್ಕಳಿಗೆ, ಹೊಸದಾಗಿ ಪರಿವರ್ತಿತವಾದವನಿಗೆ ಅಥವಾ

ಸಾಮಾನ್ಯವಾಗಿ ಕ್ರೈಸ್ತರಿಗೆ ಉಪಯೋಗಿಸಿದರೂ ಅದರ ಬೋಧನೆಯು ಎಲ್ಲರಿಗೂ ಅನ್ವಯವಾಗುತ್ತದೆ: ಇನ್ನೊಬ್ಬನಿಗೆ ತಪ್ಪನ್ನು ಮಾಡಲು ಪ್ರೇರೇಪಿಸುವುದನ್ನು ಖಂಡಿತವಾಗಿ ಮಾಡಬಾರದು (ನೋಡಿರಿ ರೋಮಾಪುರ 14:13, 21). ಯಾವ ಮನುಷ್ಯನಿಂದ ತೊಡಕುಗಳು ಬರುವವೋ ಅವನಿಗೆ "ಅಯ್ಯೋ" ಎಂದು ಹೇಳಲ್ಪಟ್ಟಿದೆ (ಮತ್ತಾಯ 18:7).

ಯೇಸುವಿನ ಮಾತುಗಳು ಆತ್ಮಾವಲೋಕನವನ್ನು ಸೂಚಿಸುವವು ಆಗಿವೆ: ನಮಗೆ ಮತ್ತು ಇತರರಿಗೆ ತೊಂದರೆ ಮಾಡುವ ಏನನ್ನಾದರೂ ನಾವು ನಿಲ್ಲಿಸಲಿದ್ದೇವೆಯೇ? ಹಾಗಾದರೆ ನಮ್ಮ ಜೀವಿತದಿಂದ ಅವುಗಳು ತೆಗೆದುಹಾಕಲ್ಪಡಬೇಕು:

> ಇದಲ್ಲದೆ ನಿನ್ನ ಕೈಗಳು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವುದಾದರೆ ಅದನ್ನು ಕತ್ತರಿಸಿಬಿಡು; ಎರಡು ಕೈಯುಳ್ಳವನಾಗಿದ್ದು ಆರದ ಬೆಂಕಿಯಾಗಿರುವ ನರಕದಲ್ಲಿ ಬೀಳುವುದಕ್ಕಿಂತ ಕೈಕಳಕೊಂಡವನಾಗಿ ಜೀವದಲ್ಲಿ ಸೇರುವದು ನಿನಗೆ ಉತ್ತಮ. ಮತ್ತು ನಿನ್ನ ಕಾಲು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವುದಾದರೆ ಅದನ್ನು ಕಡಿದುಬಿಡು; ಎರಡು ಕಾಲುಳ್ಳವನಾಗಿದ್ದು ನರಕದಲ್ಲಿ ಹಾಕಿಸಿಕೊಳ್ಳು ವುದಕ್ಕಿಂತ ಕಾಲು ಕಳಕೊಂಡವನಾಗಿ ಜೀವದಲ್ಲಿ ಸೇರುವದು ನಿನಗೆ ಉತ್ತಮ. ನಿನ್ನ ಕಣ್ಣು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವುದಾದರೆ ಅದನ್ನು ಕಿತ್ತುಬೀಸಾಡು; ಎರಡು ಕಣ್ಣುಳ್ಳವನಾಗಿದ್ದು ನರಕದಲ್ಲಿ ಹಾಕಿಸಿಕೊಳ್ಳುವುದಕ್ಕಿಂತ ಒಂದೇ ಕಣ್ಣುಳ್ಳವ ಆಗಿದ್ದು ದೇವರ ರಾಜ್ಯದಲ್ಲಿ ಸೇರುವದು ನಿನಗೆ ಉತ್ತಮ. ನರಕದಲ್ಲಿ ಅವರನ್ನು ಕಡಿಯುವ ಹುಳುವು ಸಾಯುವುದಿಲ್ಲ, ಬೆಂಕಿ ಆರುವುದಿಲ್ಲ[34] (ಮಾರ್ಕ 9:43-48).

ಯೇಸು ಇದೇ ರೀತಿಯ ಪದಪುಂಜವನ್ನು ಇತ್ತೀಚೆಗೆ ಪರ್ವತ ಪ್ರಸಂಗದಲ್ಲಿ ಬಳಸಿದ್ದನು (ನೋಡಿ ಮತ್ತಾಯ 5:27-30).[35] ದೇಹವು ಊನಾಗುವುದಕ್ಕೆ ಕರ್ತನು ಪ್ರೇರೇಪಿಸುತ್ತಿಲ್ಲ, ಆದರೆ ಆತ್ಮವು ದಂಡಿಸಲ್ಪಡುದನ್ನು ಮಾತ್ರ ಸೂಚಿಸುವವನಾಗಿದ್ದಾನೆ. ನಮ್ಮ ಜೀವಿತದಲ್ಲಿ ಯಾವುದು ಕೆಟ್ಟದ್ದಕ್ಕೆ ಪ್ರೇರೇಪಿಸುವುದಾಗಿರುತ್ತದೆಯೋ, ಎಂದು ಎಷ್ಟೇ ಅಮೂಲ್ಯವಾಗಿರಲಿ, ಅದನ್ನು ನಿರ್ದಯೆಯಿಂದ ತೆಗೆದುಹಾಕಬೇಕು.

ನರಕದ ಬಗೆಗೆ ಮಾತನಾಡುವುದಾದರೆ, "ಅಲ್ಲಿನ ಅವರನ್ನು ಕಡಿಯುವ ಹುಳುವು ಸಾಯುವುದಿಲ್ಲ, ಬೆಂಕಿ ಆರುವುದಿಲ್ಲ," ಯೇಸು ಈ ಯೋಚಿಸಲಾಗದ ಮಾತುಗಳನ್ನು ಇದಕ್ಕೆ ಸೇರಿಸಿದ್ದಾನೆ: "ಪ್ರತಿಯೊಬ್ಬನಿಗೂ ಬೆಂಕಿಯೆಂಬ ಉಪ್ಪಿನ ಹದವು ಕೊಡಲ್ಪಡಬೇಕು" (ಮಾರ್ಕ 9:49).[36] ಇತ್ತೀಚೆಗೆ ರಕ್ಷಣಾ ಸಾಧಕವಾದದ್ದನ್ನು ಸೂಚಿಸುವುದಕ್ಕಾಗಿ ಉಪ್ಪಿನ ಚಿತ್ರಣವನ್ನು ಬಳಸಿದ್ದಾನೆ (ಮತ್ತಾಯ 5:13[37]). ರಕ್ಷಣಾಸಾಧಕದ ವಿಚಾರವು ಬಹುಶಃ ಇಲ್ಲಿ ತೋರಿಸಲ್ಪಟ್ಟಿದೆ: ದೈವೀಕವಲ್ಲವದವರು ನರಕದ ಬೆಂಕಿಯಲ್ಲಿ "ಇಡಲ್ಪ" ಡುವವರಾಗಿರುತ್ತಾರೆ; ಅಲ್ಲಿ ಅವರೆಂದಿಗೂ ಸಾಯರು. ಈ ವಾಗ್ದಾನವು ಪರಲೋಕದಲ್ಲಿ ಇಡಲ್ಪಡುವವರಿಗೆ ಮಹಿಮೆಯುಕ್ತವಾದದ್ದಾಗಿದೆ; ನರಕದಲ್ಲಿ ಇಡಲ್ಪಡುವ ವಿಚಾರವನ್ನು ಇದಕ್ಕೆ ಹೋಲಿಸಿದಾಗ ಎಲ್ಲಕ್ಕಿಂತ ಭಯಾನಕವಾದ್ದಾಗಿದೆ.

ಮುಂದಿನ ವಚನದಲ್ಲಿ, ಈ ಉಪ್ಪಿನ ರೂಪಕಲಂಕಾರಕ್ಕೆ ಇನ್ನೊಂದು ತಿರುವನ್ನು ಕೊಡುವವನಾಗಿದ್ದಾನೆ: "ಉಪ್ಪು ಒಳ್ಳೆಯ ಪದಾರ್ಥವೆ; ಉಪ್ಪು ಸಪ್ಪೆಯಾದರೆ ಅದನ್ನು ಇನ್ನಾತರಿಂದ ರುಚಿಗೊಳಿಸುವಿರಿ? ನಿಮ್ಮೊಳಗೆ ಉಪ್ಪು ಇರಲಿ. ನಿಮ್ಮೊಳಗೆ ಸಮಾಧಾನದಿಂದಿರಿ" (ಮಾರ್ಕ 9:50). ಕರ್ತನು ಪರ್ವತ ಪ್ರಸಂಗದಲ್ಲಿ (ಮತ್ತಾಯ 5:13), ಈ ಅನ್ವಯದ ಸೇರಿಸುವಿಕೆಯ ಮೂಲಕ ಹೇಳಿದ ಸಂಗತಿಯನ್ನೇ ಪುನರಾವರ್ತಿಸುತ್ತಿದ್ದಾನೆ: ಒಂದು ವೇಳೆ ಅವರು ತಮ್ಮಲ್ಲಿ ವಾದವನ್ನು ಮುಂದುವರೆಸಿದ್ದಾದರೆ (ಲೂಕ 9:46), ಅವರು ತಮ್ಮ ಉಪ್ಪನ್ನು ಕಳಕೊಳ್ಳುವರು; ಅವರು "ಭೂಮಿಗೆ ಉಪ್ಪಾಗಿರಲು" ಸಾಧ್ಯವಿಲ್ಲ. "ಒಬ್ಬರಿಗೊಬ್ಬರು ಸಮಾಧಾನದಿಂದಿರು"ದನ್ನು ಕಲಿಯುವದು ಅವರಿಗೆ ಅವಶ್ಯವಿದೆ, ನೀನೂ ಮತ್ತು ನಾನೂ

ಕೂಡಾ ಒಬ್ಬರಿಗೊಬ್ಬರ ಜೊತೆ ಸಮಾಧಾನದಿಂದಿರುವದು ಅವಶ್ಯವಿದೆ!

*ಚಿಕ್ಕವರಂತೆ ಪಡಕೊಳ್ಳುವದು (ಮತ್ತಾಯ 18:10[38]).* ಇನ್ನೊಂದು ಸಾರಿ ಯೇಸು "ಚಿಕ್ಕವರು" ಎಂಬ ವಿಷಯದ ಕಡೆಗೆ ತಿರಿಗಿಕೊಳ್ಳುತ್ತಿದ್ದಾನೆ: "ಈ ಚಿಕ್ಕವರಲ್ಲಿ ಒಬ್ಬರನ್ನೂ ತಾತ್ಸಾರ ಮಾಡಬಾರದು ನೋಡಿರಿ; ಪರಲೋಕದಲ್ಲಿ ಅವರ ದೂತರ ಪರಲೋಕದಲ್ಲಿರುವ ತನ್ನ ತಂದೆಯ ಮುಖವನ್ನು ಯಾವಾಗಲೂ ನೋಡುತ್ತಲಿದ್ದಾರೆ" (ಮತ್ತಾಯ 18:10). ಗ್ರೀಕ್ ಪದದ ಭಾಷಾಂತರವಾದ: ತಾತ್ಸಾರ (despise) ಇದು "ಕೆಳಗೆ" ಮತ್ತು "ಮನಸ್ಸು" ಎಂಬ ಎರಡು ಪದಗಳನ್ನು ಕೂಡಿಸುವುದಾಗಿದೆ. ಇದು ಇನ್ನೊಬ್ಬ ವ್ಯಕ್ತಿಯನ್ನು "ಕೀಳಾಗಿ ನೋಡು" ಎಂದು ನಾವು ಅರ್ಥೈಸುವುದನ್ನು ಸೂಚಿಸುವುದಾಗಿದೆ. ನಾವೆಂದಿಗೂ ಚಿಕ್ಕ ಮಕ್ಕಳನ್ನು ... ಅಥವಾ ಹೊಸದಾಗಿ ಪರಿವರ್ತಿತವಾದವನನ್ನು ... ಅಥವಾ ಯಾವುದೇ ದೇವರ ಮಗುವನ್ನು ಕೀಳಾಗಿ ನೋಡಬಾರದು. ಪ್ರತಿಯೊಬ್ಬನೂ ದೇವರ ದೃಷ್ಟಿಯಲ್ಲಿ ಅಮೂಲ್ಯನಾಗಿದ್ದಾನೆ.

10ನೇಯ ವಚನದ ಕೊನೆಯ ಭಾಗವು ಆಕರ್ಷಕವಾದದ್ದು ಮತ್ತು ನಿರಾಶೆಮಾಡುವುದೂ ಎರಡು ಆಗಿದೆ: "ಪರಲೋಕದಲ್ಲಿ ಅವರ ದೂತರು ಪರಲೋಕದಲ್ಲಿರುವ ತನ್ನ ತಂದೆಯ ಮುಖವನ್ನು ಯಾವಾಗಲೂ ನೋಡುತ್ತಲಿದ್ದಾರೆ." "ಇದು ಪೋಷಕ ದೇವದೂತರ" ಬಗೆಗೆ ಹೆಚ್ಚಾಗಿ ಬರೆದಂಥ ಕೆಲ ಮಾತುಗಳನ್ನು ಪ್ರೋತ್ಸಾಹಿಸುವವು ಆಗಿವೆ. ದೇವದೂತರು "ರಕ್ಷಣೆಯನ್ನು ಬಾಧ್ಯವಾಗಿ ಹೊಂದಬೇಕಾಗಿರುವವರ ಸೇವೆಗೋಸ್ಕರ ಕಳಿಹಿಸಲ್ಪಡುವ ಊಳಿಗದ ಆತ್ಮ" (ಇಬ್ರಿಯ 1:14) ಎಂದು ಬೈಬಲ್ ನಮಗೆ ಬೋಧಿಸುವುದಿಲ್ಲ. ಮುಂದೆ McGarvey ರವರು, ವ್ಯಾಖ್ಯಾನಿಸಿದ ಈ ವಚನವು "ಸೇವೆಗೋಸ್ಕರ ಆತ್ಮಗಳು ಕೇವಲ ಸಾಮಾನ್ಯವಾದದ್ದು ಅಲ್ಲ ಆದರೆ ಕೆಲ ಆತ್ಮಗಳು ಕೆಲ ವ್ಯಕ್ತಿಗಳೊಂದಿಗೆ ಸುರ್ಪದಿಯಲ್ಲಿದ್ದು ಒಪ್ಪಿಸಿಕೊಂಡವು ಆಗಿರುತ್ತವೆ."[39] ಇದಕ್ಕಿಂತ ಹೆಚ್ಚಿನ ಸಾಮಾನ್ಯ ಸತ್ಯಗಳು ತರ್ಕವೇ ಆಗಿದೆ ಎಂದಿರುತ್ತಾರೆ.

ಪ್ರತಿದಿನ ಮಕ್ಕಳು ಮರಣಿಸುವ ವಾಸ್ತವವು, ಕೆಲಸಾರಿ ಭೀಕರವಾದ ರೀತಿಯಾಗಿದ್ದು, ಪೋಷಕ ಆತ್ಮಗಳು ದೇವರ ನಿಯಮವನ್ನು ಎತ್ತಿಡುವುದಕ್ಕೆ ಅಧಿಕಾರವನ್ನು ಹೊಂದಿಲ್ಲ ಎಂಬುದಕ್ಕೆ ನಮ್ಮನ್ನು ಒಪ್ಪಿಸಲು ಸಕಾಗಬಹುದು. ವಾಸ್ತವವಾಗಿ, ಅವರ ಮೂಲ ಕಾಳಜಿ ಎಂದರೆ ದೈಹೀಕ ಆರೋಗ್ಯವಲ್ಲ ಆದರೆ ಅವರು ಆತ್ಮೀಕವಾಗಿ ಯೋಗ್ಯವಾಗಿ ಜೀವಿಸುವುದೇ ಎಂದು ದೇವರ ಸಾಮಾನ್ಯ ಸ್ವಾಭಾವವು ಸೂಚಿಸುವುದಾಗಿದೆ. ಯಾರು ಆತನವರಾಗಿರುತ್ತಾರೋ ಮತ್ತು ಅಲ್ಲಿ ನಿಲ್ಲಿಸಿಬಿಡುವ ದೇವರ ಕಾಳಜಿಗೆ ಇನ್ನೊಂದು ಸಾಕ್ಷಿಯಾಗಿರುವಂತೆ ಮತ್ತಾಯ 18:10ನ್ನು ಪರಿಣಿಸಿದಾಗ ನಾವು ಬಹುಶಃ ಸರಿಯಾಗಿ ಮಾಡುತ್ತಿರಬಹುದು (1 ಪೇತ್ರ 5:7; ನೋಡಿರಿ ಎಹೆಜ್ಕೇಲ 34:12).

*ಚಿಕ್ಕವರಂತೆ ಪಡಕೊಳ್ಳುವದು (ಮತ್ತಾಯ 18:12-14).* ಕರ್ತನು ನಮಗೆ ಚಿರಪರಿಚಿತವಾದ ಒಂದು ದೃಷ್ಟಾಂತದೊಂದಿಗೆ "ಚಿಕ್ಕವರು" ಎಂಬುದರ ಬೋಧನೆಯನ್ನು ಮುಗಿಸುವವನಾಗಿದ್ದಾನೆ:

> ನಿಮಗೆ ಹೇಗೆ ತೋರುತ್ತದೆ? ಒಬ್ಬ ಮನುಷ್ಯನಿಗೆ ನೂರು ಕುರಿ ಇರಲಾಗಿ ಅವುಗಳಲ್ಲಿ ಒಂದು ತಪ್ಪಿಸಿಕೊಂಡರೆ ಅವನು ತೊಂಬತ್ತೊಂಬತ್ತು ಕುರಿಗಳನ್ನು ಬಿಟ್ಟು ಬೆಟ್ಟಕ್ಕೆ ಹೋಗಿ ತಪ್ಪಿಸಿಕೊಂಡದ್ದನ್ನು ಹುಡುಕುತ್ತಾನಲ್ಲವೆ. ಅದು ಸಿಕ್ಕಿದರೆ ತಪ್ಪಿಸಿಕೊಳ್ಳದೆ ಇರುವ ತೊಂಬತ್ತೊಂಬತ್ತು ಕುರಿಗಳಿಗಿಂತ ಆ ಒಂದಕ್ಕೋಸ್ಕರ ಹೆಚ್ಚಾಗಿ ಸಂತೋಷಪಡುವನೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಹಾಗೆಯೇ ಈ ಚಿಕ್ಕವರಲ್ಲಿ ಒಬ್ಬನಾದರೂ ಕೆಟ್ಟುಹೋಗುವದು ಪರಲೋಕದಲ್ಲಿರುವ ನಿಮ್ಮ ತಂದೆಯ ಚಿತ್ತವಲ್ಲ (ಮತ್ತಾಯ 18:12-14).

ಯೇಸು ನಂತರ ಕಳೆದ ಹೋದ ಕುರಿಯ ಕಥೆಯೊಂದಿಗೆ ಕಳೆದು ಹೋದ ನಾಣ್ಯ

ಮತ್ತು ತಪ್ಪಿಹೋದ ಮಗ ಎಂಬವುಗಳನ್ನು ಜೋಡಿಸಿದ್ದು ಇದು ಬೈಬಲಿನಲ್ಲಿಯೇ ಬಲು ಅವಿಸ್ಮರಣೀಯ ಅಧ್ಯಾಯನವನ್ನು ಉತ್ಪಾದಿಸಿದಂತದ್ದು ಆಗಿದ್ದು: ಲೂಕ 15ರಲ್ಲಿ ಆ ವಿಷಯವು ಮತ್ತು ದೇವರು "ಯಾವನಾದರೂ ನಾಶವಾಗುವುವುದಕ್ಕೆ ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದಾನೆ" (2 ಪೇತ್ರ 3:9; KJV) ಎಂಬುದೂ ಎಂದೇ ಆಗಿವೆ.

ತಿರುಗಿ "ಚಿಕ್ಕವರ" ಈ ಪದಕ್ಕಾಗಿ ವಿವಿಧ ಅನ್ವಯಗಳನ್ನು ಮಾಡಬಹುದಾಗಿದೆ: ಚಿಕ್ಕ ಮಕ್ಕಳು ಬೆಳೆದು ದಾರಿತಪ್ಪಿ ಹೋಗಿ ಪಾಪದ ಬೆಟ್ಟದಲಿಲದ್ದಾರೆ (ರೋಮಾಪುರ 3:23); ಅವರನ್ನು ಮೃದುವಾಗಿ ಕರ್ತನೆಡೆಗೆ ತರುವುದು ನಮಗೆ ಅವಶ್ಯವಿದೆ. ಒಮ್ಮ ಹೊಸ ಪರಿವರ್ತಿತನು - ಅಥವಾ ಹಳೆಯ ಪರಿವರ್ತಿತನು ನಂಬಿಕೆಯಿಂದ ದೂರಹೋಗಿದ್ದಾದರೆ (ಇಬ್ರಿಯ 2:1); "ಅಂಥವನ ಒಳ್ಳೆಯತನದ ಆತ್ಮವನ್ನು ಪುನಃ ತುಂಬಿಸುವದು" ನಮಗೆ ಅವಶ್ಯವಿದೆ (ಗಲಾತ್ಯ 6:1; ನೋಡಿರಿ ಯಾಕೋಬ 5:19, 20).

## ಮುಕ್ತಾಯ

ಯೇಸುವಿನ ಬೋಧನೆಯು ಇಲ್ಲಿಗೆ ಮುಗಿಯಲಿಲ್ಲ. ನಾವು ನೋಡಿದಂತೆ ಸಹೋದರರಲ್ಲಿನ ಸಂಬಂಧದ ಬಗೆಗೆ ಆತನು ಬಲು ನಿಶ್ಚಿತತೆಯನ್ನು ಹೊಂದಿದ್ದಾನೆ (ಮತ್ತಾಯ 18:15-35). ಆ ಮುಖ್ಯ ವಿಷಯದ ಮೇಲಿನ ನಮ್ಮ ಚರ್ಚೆಯ ಮುಂದಿನ ಪಾಠದವರೆಗೂ ಕಾಯಬೇಕಾಗಬಹುದು.

ಇದನ್ನು ಮುಗಿಸುತ್ತಿರುವಂತೆ,[40] "ನೀವು ತಿರುಗಿಕೊಂಡು ಈ ಚಿಕ್ಕಮಕ್ಕಳಂತೆ ಆಗದೆ ಹೋದರೆ ನೀವು ಪರಲೋಕ ರಾಜ್ಯದಲ್ಲಿ ಸೇರುವದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಹೀಗಿರುವುದರಿಂದ ಯಾವನು ಈ ಚಿಕ್ಕಮಗುವಿನಂತೆ ತನ್ನನ್ನು ತಗ್ಗಿಸಿಕೊಳ್ಳುತ್ತಾನೋ, ಅವನೇ ಪರಲೋಕರಾಜ್ಯದಲ್ಲಿ ಹೆಚ್ಚಿನವನು" ಎಂಬ ಮತ್ತಾಯ 18:3, 4 ರಲ್ಲಿನ ಕರ್ತನ ಹೇಳಿಕೆ ಯತ್ತ ನಾನು ತಿರುಗಲು ಬಯಸುತ್ತೇನೆ. ನಮ್ಮ ಅಧ್ಯಯನವು ಒಬ್ಬನು ತನ್ನನ್ನು ಮಗುವಿನ ಹಾಗೆ ತಗ್ಗಿಸಿಕೊಳ್ಳದಾದರೆ ಶ್ರೇಷ್ಟನಾಗಲಾರನು: ಈ ರೀತಿಯಲ್ಲಿ ತಗ್ಗಿಸಿಕೊಳ್ಳದೆ ದೇವರ ರಾಜ್ಯವನ್ನು ಪ್ರವೇಶಿಸಲಾರನು ಎಂದು ಈಗ ನಾನು ಸೂಚಿಸಬಯಸುತ್ತೇನೆ.

ತಾವು ಪಾಪದಲ್ಲಿ ಕಳೆದುಹೋಗಿರುವುದನ್ನು ಒಪ್ಪಿಕೊಳ್ಳುವುದರಲ್ಲಿ ಕೆಲವರು ಬಲು ಹೆಮ್ಮೆಯುಳ್ಳವರಾಗಿರುತ್ತಾರೆ; ಕೆಲವರು ಯೇಸುವಿಗಾಗಿ ಅವರ ಅವಶ್ಯಕತೆಯನ್ನು ಗುರುತಿಸಿಕೊಂಡಿದ್ದಕ್ಕಾಗಿ ಬಲು ಹೆಮ್ಮೆಪಡುವವರಾಗಿದ್ದಾರೆ; ಕೆಲವರು ದೀಕ್ಷಾಸ್ನಾನ ಹೊಂದುವ ಮೂಕ ಆತನ ಚಿತ್ತಕ್ಕೆ ಒಪ್ಪಿಸಿಕೊಡುವದರಲ್ಲಿ ಹೆಮ್ಮೆಪಡುವವರಾಗಿದ್ದಾರೆ. ಆ ತರದ ಗರ್ವದ ಆತ್ಮವು ನರಕದಲ್ಲಿರುವಂಥದ್ದಾಗಿದೆ! ತ್ರಾಸದಾಯಕ ಹೆಮ್ಮೆಯು ನಮ್ಮ ಜೀವಿತವನ್ನು ಆಳದಿರಲಿ ಎಂದು ನಾನು ಪ್ರಾರ್ಥಿಸುವವನಾಗಿದ್ದೇನೆ.[41] ದೇವರ ಚಿತ್ತವನ್ನು ನೀವು ಮಾಡಬೇಕಾದರ, ನಿಮ್ಮ ಗರ್ವವನ್ನು ಬಿಟ್ಟುಬಿಡಿರಿ ಮತ್ತು ಅದನ್ನು ಇಂದೇ ಮಾಡಿರಿ!

---

## ಮಾಹಿತಿ

ಈ ಪಾಠದಲ್ಲಿನ ಅನೇಕ ಭಾಗಗಳು ಪ್ರಸಂಗಗಳಂತೆ ಬೆಳೆದುಬಂದಿವೆ. ದೆವ್ವಪೀಡಿತನಾದ ಒಬ್ಬ ಹುಡುಗನ ಸ್ವಸ್ಥವಾಗುವಿಕೆಯ ಮೇಲಿನ ಪ್ರಸಂಗವು ಈ ಪಾಠವನ್ನು ಅನುಸರಿಸುವುದಾಗಿದೆ. ಈ ಕಥೆಯ ಇನ್ನೊಂದು ಮಾರ್ಗವು "ಬೆಟ್ಟದ ತುದಿಯಿಂದ ತಗ್ಗಿನವರೆಗೆ" ಆಗಿದ್ದು ಅದು ಕೆಲಸಾರಿ ನಮಗೆ "ಬೆಟ್ಟದ ತುದಿಯ" ಅನುಭವದ ಅವಶ್ಯಕತೆಯು ಇದೆ ಎಂದು ವಿವರಿಸುವದಾಗಿದೆ. ಆದರೆ ಜೀವಿತವು "ತಗ್ಗಿನಲ್ಲಿ" ಇರುವುದಾಗಿರಬೇಕು. ಮಾನವನ ಕಡೆಗಿನ ದೇವರನ್ನು ಮತ್ತು ಸಂಗತಿಗಳು ನಮ್ಮನ್ನು ಹಿಂಸಿಸುವಾಗ ನಮ್ಮ ಸ್ವಂತದ ಪ್ರವೃತ್ತಿ

ಬಹುಶಃ "ಯೇಸು ಹತಾಶೆಗೊಂಡ ದಿನ" ಜೊತೆ ಸೇರಿಸಲಾದ ಒತ್ತಿ ಹೇಳುವಿಕೆಯ ಇನ್ನೂ ಮತ್ತೊಂದು ಮಾರ್ಗ ಆಗಿರಬಹುದು. ಮೆಚ್ಚಿಕೆಯಿಲ್ಲದ ಬೆಳಕನ್ನು ದೇವರ ಕಾರ್ಯಗಳ ಮೇಲೆ ಹಾಕಲಾರೆವು ಎಂಬುದರ ಬಗೆಗೆ ಕಳಜಿ ತೆಗೆದುಕೊಳ್ಳುವಂಥ ಮೀನಿನ ಬಾಯಲ್ಲಿನ ನಾಣ್ಯ ಎಂಬ ಆಕರ್ಷಕವಾದ ಅದ್ಭುತಕಾರ್ಯವು ಬೋಧನೆಯ ಮೂಲವಾಗಿರ ಬಹುದು. "ಚಿಕ್ಕವರು" ಎಂಬ ಯೇಸುವಿನ ಬೋಧನೆಗಳು ವಿವಿಧವಾದ ಉದ್ದೇಶಗಳನ್ನು ಇರಿಸುವುದಾಗಿದ್ದು, ಮಕ್ಕಳೆಡೆಗಿನ ನಮ್ಮ ಜವಾಬ್ದಾರಿ, ಹೊಸತಾಗಿ ಪರಿವರ್ತಿತವಾದವರೆಡೆಗೆ ಮತ್ತು ಮತ್ತಿತರಡೆಗಿನ ನಮ್ಮ ಜವಾಬ್ದಾರಿಯನ್ನು, ಒಳಗೊಂಡಿದೆ. ಚಿಕ್ಕಮಕ್ಕಳಂತಾಗಬೇಕೆಂಬ ಎಂಬ ಕ್ರಿಸ್ತನ ಸವಾಲು ಮಕ್ಕಳಹಾಗಿರುವ ಅನೇಕ ಪ್ರಸಂಗಗಳನ್ನು ಪ್ರೇರೇಪಿಸುವುದಾಗಿದೆ. ನಾನು ಟ್ರುತ್ ಪಾರ್ ಟುಡೇದ ಮೇ 1990ರ ಸಂಚಿಕೆಯಲ್ಲಿ "ಮಕ್ಕಳಹಾಗಿರು ಹೊರತಾಗಿ ಮಗುತನವಲ್ಲ" ಎಂಬ ಪ್ರಸಂಗವನ್ನು ಹೊಂದಿದ್ದೇನೆ. ಈ ಪದವನ್ನು ಕೆಲವರು ಇದನ್ನು "ನೀನು ಪರಿವರ್ತಿತ ವಾಗದ ಹೊರತು" ಎಂದು ಸಾಮಾನ್ಯವಾಗಿ ಪರಿವರ್ತಿತವಾಗುವವರಿಗೆ ("ಪರಿವರ್ತಿತವಾಗು") ಇದರ ಅರ್ಥವು ಮತ್ತು ಪರಿವರ್ತನೆಯಲ್ಲಿ ಇರುವ ವಿವಿಧ ಅಂಶಗಳು ಬೋಧಿಸಲು ಬಳಸುವವರಾಗಿರುತ್ತಾರೆ.

ಅಂತಿಮವಾದ ಟಿಪ್ಪಣಿಯು ಇಲ್ಲಿದೆ: ಮತ್ತಾಯ 18:15-35 ಈ ಪಾಠದೊಡನೆ ಸ್ವಾಭಾವಿಕವಾಗಿ ಹೊಂದಿಕೆಯಾಗಿದ್ದು ಮುಂದಿನಕ್ಕೂ ಹೊಂದಿಕೆಯಾಗುವುದಾಗಿದೆ. ನಾನು ವಚನ 14ವನ್ನು ಎರಡು ಪಾಠಗಳಿಗಾಗಿ ಮತ್ತು ಹೆಚ್ಚಿನವುಗಳಿಗಾಗಿ ಓದುವ ಅಭ್ಯಾಸಮಾಡಿ ಈ ಪಾಠವನ್ನು ಸಮಾರೋಪಗೊಳಿಸುವವನಾಗಿದ್ದೇನೆ. ಹೇಗೋ ವಚನ 15ರಿಂದ 35ರ ಜೊತೆ ಈ ಪಾಠವನ್ನು ಯೇಸುವಿನ ಗಲಿಲಾಯದ ಶ್ರೇಷ್ಟ ಸೇವೆಯ ಪಾಠದೊಡನೆ ಸುತ್ತುವ ರೀತಿಯಲ್ಲಿ ಒಳಗೊಳ್ಳಲಿ ಎಂದು ನೀವು ಹಾರೈಸಬಹುದು, ನೀವು ಮಾಡಿದರೆ, ಐದನೆಯ ಅಂಶವಾಗಿ, "ಶಿಷ್ಯತ್ವದ ಲಕ್ಷಣಗಳು"; "ಕರ್ತನ ಸೂಚಿಸಿದ ಮಾರ್ಗದರ್ಶನದಿಂದ ಹೊರತು ನಿಮ್ಮ ಭಾವನೆಗಳಿಂದ" ಎಂದೂ ನೀವು ಸೇರಿಸಬಹುದು.

---

ಟಿಪ್ಪಣಿಗಳು

[1]Living Bible ದ ಸಾರಾಂಶ. [2]ಯೇಸುವಿನ ವಿಮರ್ಷಕರ ಕ್ರಿಯೆ ಮತ್ತು ಭಾವನೆ ಸೂಚಿತವಾಗಿವೆ. [3]2 ತಿಮೋಥೆ 2:13 ನೋಡಿರಿ. [4]ಕಥೆಯ ಬಗೆಗಿನ ಹೆಚ್ಚಿನವುಗಳಿಗಾಗಿ ಈ ಸಂಚಿಕೆಯಲ್ಲಿನ "ಪಾಪ" ಎಂಬ ಪ್ರಸಂಗವನ್ನು ನೋಡಿರಿ. [5]ಮಾರ್ಕನ ವಿವರಣೆಯಲ್ಲಿ "ಆತನು ಪ್ರಾರ್ಥನೆ ಮಾಡುತ್ತಿರಲಾಗಿ" (ಮಾರ್ಕ 9:29), ಆತನ ಮುಖಭಾವವು ಚರ್ಚೆಯಲ್ಲಿನ ವಾಸಿಯಾಗುವ ಘಟನೆಯನ್ನು ನೋಡಿರಿ. [6]ಈ ಪುಸ್ತಕದಲ್ಲಿ ನಂತರದಲ್ಲಿ ಸಿಕ್ಕುವ "ನನ್ನ ಅಪನಂಬಿಕೆಯಲ್ಲಿ ಸಹಾಯಿಸು" ಎಂಬುದರ ಚರ್ಚೆಯಲ್ಲಿನ ವಾಸಿಯಾಗುವ ಘಟನೆಯನ್ನು ನೋಡಿರಿ. [7]ಅವರು ಗಲಿಲಾಯಕ್ಕೆ ಯಾವಾಗ ಮರಳಿದರು ಎಂಬುದು ಸ್ಪಷ್ಟವಿಲ್ಲ. ರೂಪಾಂತರ ಮತ್ತು ದೆವ್ವಹಿಡಿದ ಹುಡಗನನ್ನು ವಾಸಿಮಾಡುವಿಕೆ ಫಿಲಿಪ್ಪಿಯ ಕೈಸರಯದ ಹತ್ತಿರದಲ್ಲಿಯೇ ನಡೆದಿರಬೇಕು ಈ ಘಟನೆಗಳ ನಂತರ. ಯೇಸು ಗಲಿಲಾಯಕ್ಕೆ ಮರಳಿದನು ಎಂದು ಅನೇಕ ವಿಶ್ಲೇಷಣಾಕಾರರು ನಂಬುವವರಾಗಿದ್ದಾರೆ. ರೂಪಾಂತರ ಬೆಟ್ಟ ಮತ್ತು ವಾಸಿಯಾಗುವಿಕೆ ನಡೆಯುವ ಮೊದಲೇ ಯೇಸು ಮತ್ತು ಹನ್ನೆರಡು ಜನ ಈಗಾಗಲೇ ಗಲಿಲಾಯಕ್ಕೆ ಪ್ರಯಾಣ ಬೆಳಸಿದ್ದರು ಎಂದು ಕೆಲವರು ಯೋಚಿಸುವರಾಗಿದ್ದಾರೆ. ರೂಪಾಂತರ ಬೆಟ್ಟ ಮತ್ತು ವಾಸಿ ಯಾಗುವಿಕೆಯು ಗಲಿಲಾಯಕ್ಕೆ ಪ್ರಯಾಣ ಬೆಳಸುವ ಮಧ್ಯದಲ್ಲಿ ನಡೆದದ್ದು ಎಂದು ಕೆಲವು ಮಾತ್ರ ವಿಶ್ಲೇಷಣಾಕಾರರು ಹೇಳುವವರಾಗಿದ್ದಾರೆ. [8]ಮಾರ್ಕನ ವಿವರಣೆಯಲ್ಲಿ "ಮೂರು ದಿನಗಳ ನಂತರ" ಎಂದಿದ್ದರೆ ಮತ್ತಾಯನಲ್ಲಿ "ಮೂರನೆಯ ದಿನದಲ್ಲಿ" ಎಂದಿದೆ. ನಮ್ಮಲ್ಲಿ ಹೆಚ್ಚಿನವರು ಎರಡು ವಿಭಿನ್ನ ಅರ್ಥಗಳ ಪರಿಚ್ಛೇದಗಳನ್ನು ಹೊಂದಿದ್ದೇವೆ - ಆದರೆ ಅವುಗಳು ಯೆಹೂದಿಯರಿಗಲ್ಲ. ಯೇಸು ಸಮಾಧಿಯಲ್ಲಿ ಮೂರು ದಿನ ಇದ್ದನೋ ಇಲ್ಲವೋ ಎಂಬುದನ್ನು ಅಧ್ಯಯನ ಮಾಡುವಾಗ ಇದನ್ನು ಮನದಲ್ಲಿ ಇಟ್ಟುಕೊಳ್ಳಿ. [9]ಯೇಸುವಿನ ಮರಣದ ಬಗೆಗಿನ ಈ ಘೋಷಣೆಯು ಆದ ಸ್ವಲ್ಪ ಹೊತ್ತಿನ ನಂತರ, ಅಪೊಸ್ತಲರು ದೇವರ ರಾಜ್ಯದಲ್ಲಿ ಯಾರು ಹಿರಿಯರು ಎಂಬುದರ ಬಗೆಗೆ ಚರ್ಚೆಯನ್ನು ಪ್ರಾರಂಭಿಸಿದರು (ನೋಡಿ ಲೂಕ 9:45, 46). ಅವರು ಇನ್ನೂ ಭೌತಿಕ ಐಹಿಕ, ರಾಜಕೀಯ ರಾಜ್ಯದ

ಮನದವರಗಿದ್ದರು. ಉದಾಹರಣೆಗಾಗಿ, ಯೇಸು ತನ್ನ ಮರಣವು ಅಪೊಸ್ತಲರಂತೆ ಅದೇ ತರದ ಅಂಶಗಳನ್ನು ಹೊಂದಿದ ಇತರ ಯೆಹೂದಿಗಳನ್ನು ಗಲಿಬಿಲಿಗೊಳಿಸಿದಾಗ ಹೇಗೆ ಬೋಧಿಸಿದನು ನೋಡಿರಿ ಯೋಹಾನ 12:33, 34. [10]James Burton Coffman, *Commentary on Luke* (Austin, Tex.: Firm Foundation Publishing House, 1975), 187.

[11]ಮತ್ತಾಯನು ಕೇವಲ ಮಾಜಿ ಸುಂಕದವನಾಗಿದ್ದು, ದೇವಾಲಯದ ತೆರಿಗೆ ಘಟನೆಯನ್ನು ದಾಖಲಿಸಿದ್ದಾನೆ. [12]"ಎರಡು ದ್ರಚಮಾ" ಇದು ಗ್ರೀಕ್‌ನಲ್ಲಿ ಏಕವಚನವಾಗಿದೆ. [13]ಹೊಸ ಒಡಂಬಡಿಕೆಯ ಲೂಕ 15:8, 9ರಲ್ಲಿ ಇದೊಂದೇ ಸ್ಥಳದಲ್ಲಿ ಮಾತ್ರ ಒಂದು ದ್ರಚಮಾ ನಾಣ್ಯವು ಸೂಚಿತವಾಗಿದೆ. ಮತ್ತಾಯರಲ್ಲಿ 17 ಎರಡು ದ್ರಚಮಾ ಸೂಚಿತವಾಗಿದೆ. [14]ನಾನು ಇರುವ ಪ್ರದೇಶದಲ್ಲಿ "ಕನಿಷ್ಟಕೂಲಿ" ಎಂದು ಇದನ್ನು ಹೇಳುವವರಾಗಿದ್ದೇವೆ. [15]NKJV ಮತ್ತು NIVಯಲ್ಲಿ ನೋಡಲಿ. [16]ಪೇತ್ರನು "ಮನೆಯೊಳಗೆ" ಬಂದಾಗಿನಿಂದ (ಮತ್ತಾಯ 17:25) ಅಧಿಕಾರಿಗಳೊಂದಿಗೆ ಮಾತನಾಡಿದ ನಂತರ, ಆ ಸಂಭಾಷಣೆಯ ಪ್ರಾರಂಭದಲ್ಲಿ ಆತನು ಮನೆಯ ಹೊರಗೆ ಇದ್ದಿರಬಹುದು. [17]ಪೇತ್ರನನ್ನೂ ಹೊರತಾಗಿ ಎಂದು ಯೇಸು ಇಲ್ಲಿ ಖಚಿತವಾಗಿ ಹೇಳುತ್ತಿಲ್ಲ, ಆದರೆ ಅಪೊಸ್ತಲರು ಇದಕ್ಕೆ ಹೊರತಾಗಿರಲಿ ಬಿಡಲಿ ಕ್ರಿಸ್ತನ ಸಮಾರೋಪವು ಅದೇ ಆಗಿದ್ದು: ತೆರಿಗೆಯು ತುಂಬಲ್ಪಡಬೇಕು. [18]ವ್ಯಾವಹಾರಿಕವಾದ ಮೀನುಗಾರನಾಗಿದ್ದುಕೊಂಡು, ಪೇತ್ರನು ಸಾಮಾನ್ಯವಾಗಿ ಬಳಸುತ್ತಿದ್ದನು (ಮತ್ತಾಯ 4:18), ಆದರೆ ಆ ಬಲೆಯು ನೂರಾರು ಮೀನುಗಳನ್ನು ಹಿಡಿಯುತ್ತಿತ್ತು. ಇದೆಲ್ಲದರಲ್ಲಿ ಈ ಸಂದರ್ಭದಲ್ಲಿ ಪೇತ್ರನಿಗೆ ಅವಶ್ಯವಿದ್ದುದು ಒಂದು ಮೀನು. [19]Richard Rogers, *Behold Your King (Book of Matthew)* (Lubbock, Tex.: Sunset Study Series, n.d.), 22. [20]NIVಯನ್ನು ನೋಡಿರಿ. ಹೊಸ ಒಡಂಬಡಿಕೆಯ ಇದೊಂದೇ ಸ್ಥಳದಲ್ಲಿ ನಾಲ್ಕು ದ್ರಚಮಾ ನಾಣ್ಯವು ಸೂಚಿತವಾಗಿದೆ.

[21]ಒಬ್ಬನ ಹಕ್ಕನ್ನು ಬಿಟ್ಟುಕೊಡುವಂಥ ಸಂದರ್ಭಗಳ ಬಗ್ಗೆ ಪೌಲನು ಎರಡು ದೊಡ್ಡ ಉದ್ದವಾದ ಚರ್ಚೆಯನ್ನು ಬರೆದಿದ್ದಾನೆ (ರೋಮಾಪುರ 14; 1 ಕೊರಿಂಥ 8-10). [22]ಮತ್ತಾಯ 20:21; ಮಾರ್ಕ 10:37ನ್ನು ನೋಡಿರಿ. [23]ಕಪೆರ್ನೌಮು ಅವರು ಗಲಿಲಾಯದ ಸುತ್ತಲೂ ಪ್ರಯಾಣಿಸುವಾಗ, ಕಪೆರ್ನೌಮಿಗೆ ಅವರು ಮರಳುವಾಗ (ಮಾರ್ಕ 9:33) ಅವುಗಳು ಪ್ರತ್ಯಕ್ಷವಾಗಿ ಮಾಡಲ್ಪಟ್ಟವು. [24]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 430–31. [25]ಇದು ಪೇತ್ರನ ಮಕ್ಕಳಾದ್ದಾಗಿರಬಹುದೇ? [26]ಹಿಂದಿನ ಭಾಗದಲ್ಲಿ ಚರ್ಚಿಸಲಾದ ಗುಣಗಳಲ್ಲಿ ನಿಜ ಮಾನವೀಯತೆಯು ಕಾಣುವುದಾಗಿದೆ: ಸ್ವಮರೆಯುವಿಕೆ. ಸಾಮಾನ್ಯವಾಗಿ ಮಾತನಾಡುವುದಾದರೆ, ಚಿಕ್ಕ ಮಕ್ಕಳು ಅರ್ಥಹೀನವಾದ ಪದವಾದ "ಹಿರಿಯತನವನ್ನು" "ಮಹತ್ವವಲ್ಲದ" ಎಂದು ಎರಡು ಪದಗಳನ್ನು ವರ್ಗಿಕರಿಸುವದು ಕಷ್ಟಸಾಧ್ಯ. [27]ಆ ದಿನಗಳಲ್ಲಿ, ಯೇಸು ಹಲವು ಬಾರಿ ಸ್ವಕೇಂದ್ರಿಕೃತ ನೋಡುವಿಕೆಯ ಮಹತ್ವಾಕಾಂಕ್ಷೆಯ ಬಗೆಗೆ ಎಚ್ಚರಿಸಿದನು (ನೋಡಿ ಮತ್ತಾಯ 23:8-12; ಲೂಕ 22:24-27). [28]ನೋಡಿರಿ ಲೂಕ 14:11; 18:14; ಅಪೊಸ್ತಲರ ಕೃತ್ಯಗಳು 20:19; ಎಫೆಸ 4:2; ಕೊಲಸ್ಸೆ 3:12; ಯಾಕೋಬ 4:6; 1 ಪೇತ್ರ 3:8. [29]ಮತ್ತಾಯ 18:6 ನಂಬುವ ಚಿಕ್ಕವರ ಬಗೆಗೆ ಮಾತನಾಡುವುದಾಗಿದೆ. ಮಾರ್ಕ 9:37 ಇದಕ್ಕೆ ಸಮವಾಗಿದ್ದು ಚಿಕ್ಕವರನ್ನು ಸ್ವಾಗತಿಸುವುದರ ಜೊತೆ ಶಿಷ್ಯನಿಗೆ ಒಂದು ಬಿಂದಿಗೆ ತಣ್ಣೀರನ್ನು ಕೊಡುವುದರ ಬಗೆಗೆ ಇದೆ. ಕುರಿಗಳ ಸೂಚನೆಯು ಮತ್ತಾಯ 18:12, 13ರಲ್ಲಿ ಒಂಟಿಯಾಗಿದ್ದಂತೆ ಕಂಡುಬಂದಿದ್ದು "ಚಿಕ್ಕವರಿಗಾಗಿ" ವಿಶೇಷವಾಗಿ ಉೂಚಿತವಾಗಿದೆ (ವಚನ 14). [30]ಈ ಹಿಂದೆಯೇ ಯೇಸು ತನ್ನ ಶಿಷ್ಯರನ್ನು ಜನರು ಸ್ವೀಕರಿಸುವುದನ್ನು ಕುರಿತು ಇದೇ ಪದವನ್ನು ಬಳಸಿದ್ದನು (ಮತ್ತಾಯ 10:40; ಇದನ್ನುಸಹ ನೋಡಿ ಯೋಹಾನ 13:20).

[31]"ಒಬ್ಬನು ವೈರಿ ಎಂದು ಘೋಷಿತವಾಗದಿದ್ದರೆ ಅದು ಬಹುಶಃ ಸ್ನೇಹಿತ ಎಂಬ ಕಾರಣದಿಂದ ಇರಬಹುದು" (Robert L. Thomas, ed., and Stanley N. Gundry, assoc. ed., *A Harmony of the Gospels* [Chicago: Moody Press, 1978], 125). [32]ನಾನು ಇರುವ ಪ್ರದೇಶದಲ್ಲಿ ಅದನ್ನು ನಾವು "ಇನ್ನೊಂದೆಡೆ" ಎಂದು ಹೇಳುತ್ತೇವೆ. [33]ಪ್ರಾಚೀನ ದಿನಗಳಲ್ಲಿ, ಕೆಲ ಅಧಿಕಾರಿಗಳು ಬೀಸುವಕಲ್ಲು ಕಟ್ಟಿ ಅವರನ್ನು ಸಮುದ್ರದಲ್ಲಿ ಎಸೆಯುವಂಥ ಮರಣದಂಡನೆಯನ್ನು ಕೊಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ U.S. ನಲ್ಲಿ, ಕೆಲ ದರೋಡೆಕೋರರು ಪ್ರತ್ಯಕ್ಷವಾಗಿ ವ್ಯಕ್ತಿಗಳಿಗೆ ಭಾರವಾದ ಭಾರವನ್ನು ಹಾಕಿ ಕಟ್ಟಿ ನದಿಗಳಲ್ಲಿ ಸಾಗರ ಅಥವಾ ಸರೋವರಗಳಲ್ಲಿ ಎಸೆಯುವುದುಂಟು. [34]ನರಕವನ್ನು (*gehenna*) ವರ್ಣಿಸಲು ಯೇಸು ಅಲಂಕಾರಿಕ ಭಾಷೆಯನ್ನು ಬಳಸಿದ್ದಾನೆ ಎಂಬುದು ಅಸ್ಪಷ್ಟ: ಅಕ್ಷರ ಸಹ ಹುಳುಗಳು (maggots) ಉರಿಯುವ ಬೆಂಕಿಯಲ್ಲಿ ಇರುವದಿಲ್ಲ. ಹುಳುಗಳೂ (ಕೀಟಗಳು) ಅಲಂಕಾರಿಕ ಭಾಷೆಯಾಗಿದ್ದು ಮತ್ತು ಬೆಂಕಿಯು ಕಸದಿಂದ ತೆಗೆಯಲ್ಪಟ್ಟು ಯೆರೂಸಲೇಮಿನ ದಕ್ಷಿಣದಲ್ಲಿ ಹಿನ್ನೋನ್ ಅಥವಾ ಬೆನ್ ಹಿನ್ನೋನ್ ಕೊಳ್ಳದಲ್ಲಿ ಹಾಕಲಾಗುತ್ತದೆ

ಎಂಬುದು ಸಾಮಾನ್ಯವಾಗಿ ಒಪ್ಪಲ್ಪಟ್ಟದ್ದಾಗಿದೆ (ನೋಡಿರಿ 2 ಪೂರ್ವಕಾಲವೃತ್ತಾಂತ 28:3; 33:6; ನೆಹಮೀಯ 11:30; ಯೆರಮೀಯ 7:31, 32; 19:2, 6; 32:35). ಹುಳಗಳ ಈ ಅಲಂಕಾರಿಕವು ಬಹುಶಃ ಮನಸಾಕ್ಷಿಯು ನಿತ್ಯತ್ವದಲ್ಲಿ ತೊಂದರೆ ಪಡುವುದನ್ನು ಸೂಚಿಸುವುದಾಗಿದ್ದು (ಲೂಕ 16:25-28), ಬೆಂಕಿಯ ಅಲಂಕಾರಿಕವು ದೇವರ ಸನ್ನಿಧಾನದಿಂದ ನಿತ್ಯವಾಗಿ ಬೇರ್ಪಟ್ಟು ಕಷ್ಟಪಡುವುದನ್ನು ಸೂಚಿಸುವುದಾಗಿದೆ (2 ಥೆಸಲೋನಿಕ 1:9). [35]*ಕ್ರಿಸ್ತನ ಜೀವಿತ ಚರಿತ್ರೆ, 2ನೇ* ಪುಸ್ತಕದಲ್ಲಿ ಬರುವ “ಆದರೆ ನಾನು ನಿನಗೆ ಹೇಳುವುದೇನೆಂದರೆ” ಎಂಬ ಪಾಠದ ಪರಿಚ್ಛೆದದಲ್ಲಿನ ಚರ್ಚೆಯನ್ನು ನೋಡಿರಿ. [36]KJVಯಲ್ಲಿ “ಪ್ರತಿಯೊಂದು ಬಲಿಯೂ ಉಪ್ಪಿನೊಂದಿಗೆ ಉಪ್ಪಾಗಿರುತ್ತದೆ” ಎಂದು ಸೇರಿ ಸಲಾಗಿದೆ. ಈ ಪದಗಳು ಹಿಂದಿನ ಹೆಚ್ಚಿನ ಹಸ್ತಪ್ರತಿಗಳಲ್ಲಿ ಕಂಡುಬರುವುದಿಲ್ಲ, ಅವು ಇನ್ನೋ ರಕ್ಷಣಾತ್ಮಕ ವಿಷಯಗಳ ಬಗೆಗೆ ಹೆಚ್ಚು ಒತ್ತು ಕೊಡುವವು ಆಗಿವೆ: ಹಳೆಯ ಒಡಂಬಡಿಕೆಯ ಸಮಯದಲ್ಲಿ ಉಪ್ಪಿನ ಒಡಂಬಡಿಕೆಯು (ಯಾಜಕಕಾಂಡ 2:13) ಬಲಿಯನ್ನು ಶುದ್ಧವಾಗಿಯೂ ಮತ್ತು ರಕ್ಷಿಸಿಯೂ ಇಡುವುದಾಗಿತ್ತು. [37]*ಕ್ರಿಸ್ತನ ಜೀವಿತ ಚರಿತ್ರೆ, 2ನೇ* ಪುಸ್ತಕದಲ್ಲಿ ಬರುವ “ನೀವು ಯೋಚಿಸುವುದಕ್ಕಿಂತ ಅಮೂಲ್ಯರು ನೀವು” ಎಂಬ ಪಾಠವನ್ನು ಪುನರಾವರ್ತಿಸಿರಿ. [38]KJV ವಚನ 11ನ್ನು ಸೇರಿಸುತ್ತದೆ, ಇದು ಪ್ರಾಚೀನ ಪ್ರತಿಗಳಲ್ಲಿ ಕಾಣಿಸುವದಿಲ್ಲ. ನಮತರ ನಾವು ಲೂಕ 19:10ರಲ್ಲಿ ಈ ಪದವನ್ನು ನೋಡುತ್ತೇವೆ. [39]McGarvey and Pendleton, 434. [40]ಈ ವಿಚಾರದ ಮುಖ್ಯಸಂಗತಿಯನ್ನು ಪುನರಾವರ್ತಿಸಲು ಸ್ಥಳದ ಅವಕಾಶ ನನಗಿಲ್ಲ, ನೀವು ಬಯಸಿದ್ದಾದರೆ ಹಾಗೆ ಮಾಡಬಹುದು.

[41]ಗರ್ವದ ಮೇಲಿನ ಹೊಸ ಒಡಂಬಡಿಕೆಯ ಪರಿಚ್ಛೇದಗಳ ಕೆಲ ಮಾದರಿಗಳ ಇಲ್ಲಿವೆ: ರೋಮಾಪುರ 1:30; 2 ತಿಮೋಥೆ 3:2; ಯಾಕೋಬ 4:6; 1 ಯೋಹಾನ 2:16.